KARN010012692020

Presented on : 04-09-2020
Registered on: 04-09-2020
Decided on: 13-03-2026
Duration: 05 years 06 month 10 days

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.

**:ಉಪಸ್ಥಿತರು:**

M H ANNAYYANAVAR
Digitally signed by M H ANNAYYANAVAR
Date: 2026.03.13 14:07:24 +0530

ಶ್ರೀಯುತ ಎಂ.ಹೆಚ್.ಅಣ್ಣಯ್ಯನವರ, ಬಿಕಾಂ.ಎಲ್.ಎಲ್.ಬಿ. (ವಿಶೇಷ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

**ದಿನಾಂಕ 13 ನೇ ಮಾರ್ಚ್ ಮಾಹೆ 2026**

**ಎಸ್ .ಸಿ. ಸಂಖ್ಯೆ 26/2020**

ಫಿರ್ಯಾದಿದಾರರು: ಕರ್ನಾಟಕ ಸರ್ಕಾರದ ಪರವಾಗಿ
ಚನ್ನಪಟ್ಟಣ ಪೂರ್ವ ಪೊಲೀಸರು.
(ಪರವಾಗಿ: ಶ್ರೀ ಸರ್ಕಾರಿ ಅಭಿಯೋಜಕರು)

:: ವಿರುದ್ಧ ::

ಆರೋಪಿ: ಶ್ರೀ ಸೈಯದ್ ಜಬೀರ್,
ಬಿನ್ ಲೇಟ್ ಸೈಯದ್ ಅಬ್ದುಲ್,
ವಯಸ್ಸು 28 ವರ್ಷ.
ವಾಸಃ ಮೆಹದಿನಗರ, ಚನ್ನಪಟ್ಟಣ ಟೌನ್,
ರಾಮನಗರ.
(ಆರೋಪಿಯ ಪರವಾಗಿ ಶ್ರೀ.ಕೆ.ವಿ.ಕೆ., ವಕೀಲರು)

1. ಘಟನೆ ಜರುಗಿದ ದಿನಾಂಕ : 20-01-2020
2. ಘಟನೆ ವರದಿಯಾದ ದಿನಾಂಕ : 21-01-2020

| | | | |
|---|---|---|---|
| 3. | ಆರೋಪಿತರನ್ನು ಬಂಧಿಸಿದ ದಿನಾಂಕ | : | 21-01-2020 |
| 4. | ವಿಚಾರಣಾ ಪ್ರಾರಂಭ ದಿನಾಂಕ | : | 06-09-2021 |
| 5. | ವಿಚಾರಣಾ ಮುಕ್ತಾಯ ದಿನಾಂಕ | : | 27-07-2022 |
| 6. | ಫಿರ್ಯಾದಿಯ ಹೆಸರು | : | ಶ್ರೀ ಸಿಮ್ರಾನ್ ಖಾನ್ |
| 7. | ಆರೋಪಿಸಲ್ಪಟ್ಟ ಆಪಾದನಾ ಕಲಂಗಳು | : | ಭಾರತೀಯ ದಂಡ ಸಂಹಿತೆ ಕಲಂ.341, 504, 326, 307 ರ ಅಡಿಯಲ್ಲಿ |
| 8. | ನ್ಯಾಯಾಧೀಶರ ಅಭಿಪ್ರಾಯ | : | ಆರೋಪಿಯು ಭಾರತೀಯ ದಂಡ ಸಂಹಿತೆ ಕಲಂ.341, 504, 326 ರ ಅಡಿಯಲ್ಲಿ ಕೃತ್ಯ ಎಸಗಿರುವುದು ನಿಸ್ಸಂಶಯವಾಗಿ ಸಾಭೀತಾಗಿರುತ್ತದೆ. |
| 9. | ಶಿಕ್ಷೆ ಅಥವಾ ಆದೇಶ | : | ಅಂತಿಮ ಆದೇಶದಂತೆ |

**(ಎಂ.ಹೆಚ್. ಅಣ್ಣಯ್ಯನವರ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.

******

**:: ತೀರ್ಪು ::**

ಪ್ರಸ್ತುತ ಪ್ರಕರಣದಲ್ಲಿ ಚಾಸಾ.18/ಪ್ರಾಸಾ.11 - ಶ್ರೀ ಬಿ.ಕೆ.ಪ್ರಕಾಶ, ಪಿಎಸ್ಐ, ಚನ್ನಪಟ್ಟಣ ಪೂರ್ವ ಪೊಲೀಸ್ ಠಾಣೆ ಇವರು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.341, 504, 326, 307 ರ ಅಡಿಯಲ್ಲಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಈ ಕೇಸಿನ ಸಂಕ್ಷಿಪ್ತ ಸಾರಾಂಶವೇನೆಂದರೆ: ಪ್ರಾಸಾ.1/ಚಾಸಾ.1 – ಸಿಮ್ರಾನ್ ಇವರು ನಿಶಾನೆ ಪಿ.1 - ದೂರು ಕೊಟ್ಟಿದ್ದು, ದೂರಿನಲ್ಲಿ ದಿನಾಂಕ 20.01.2020 ರಂದು

ರಾತ್ರಿ 11.30 ಗಂಟೆ ಸಮಯದಲ್ಲಿ ನಾನು, ನನ್ನ ಸ್ನೇಹಿತರಾದ ಪ್ರಾಸಾ.2 – ಫರಾನ್ ಮೆಹದಿ ಮತ್ತು ಪ್ರಾಸಾ.3 - ಸುಹೇಲ್ ಖಾನ್ ರಾಮನಗರದಲ್ಲಿ ನನ್ನ ಬಾಬ್ತು ಕಾರನ್ನು ತರಲು ಹೋಗಿದ್ದೆವು. ಕಾರು ಚಾಲನೆಯಾಗದೆ ಕಾರಣ ವಾಪಸ್ ಮನೆಗೆ ಹೋಗಲು ಪ್ರಾಸಾ.2 - ಫರಾನ್ ಮೆಹದಿ ಇವರ ಮೋಟಾರ್ ಸೈಕಲ್‌ನಲ್ಲಿ ನಾವು ಮೂರು ಜನರು ರಾತ್ರಿ 11.00 ಗಂಟೆ ಸಮಯದಲ್ಲಿ ಚನ್ನಪಟ್ಟಣ ಟೌನ್, ಕಲಾನಗರದ ಹಯತ್ ಅಭೀಬ್ ಶಾಲೆ ಹಿಂಭಾಗ ಹೋಗುತ್ತಿರುವಾಗ ನಮಗೆ ಪರಿಚಯ ಇರುವ ಈ ಹಿಂದೆ ಮೆಹದಿ ನಗರದಲ್ಲಿ ವಾಸವಿದ್ದ ಆರೋಪಿ - ಸೈಯದ್ ಜಬೀರ್ ಎಂಬಾತನು ಏಕಾಏಕಿ ನಮ್ಮಗಳನ್ನು ಅಡ್ಡಗಟ್ಟಿ ಆತ ಕತ್ತಿನಲ್ಲಿ ನೇತು ಹಾಕಿಕೊಂಡಿದ್ದ ಕಪ್ಪು ಬಣ್ಣದ ಕಾಲೇಜ್ ಬ್ಯಾಗ್‌ನಿಂದ ಎಂ.ಓ.3 – ಡ್ರ್ಯಾಗರ್ ತೆಗೆದು ಪ್ರಾಸಾ.2 - ಫರಾನ್ ಮೆಹದಿಯ ಕುತ್ತಿಗೆಗೆ ಹೊಡೆಯಲು ಹೋದಾಗ ಆತ ಎಡಗೈಯನ್ನು ಅಡ್ಡ ಕೊಟ್ಟಾಗ ಆತನ ಎಡಗೈ ಹೆಬ್ಬೆರಳಿಗೆ ಏಟು ಬಿದ್ದು, ಸದರಿ ಬೆರಳು ಕಟ್ಟಾಗಿ ಕೆಳಗೆ ಬಿದ್ದಿದ್ದು, ಅಷ್ಟರಲ್ಲಿ ನಾವು ಕೂಗಿಕೊಂಡು ಆತನನ್ನು ಹಿಡಿದುಕೊಳ್ಳಲು ಹೋದಾಗ ಆತ ಅಲ್ಲಿಂದ ಬಾಯಿಗೆ ಬಂದಂತೆ ಬೈದುಕೊಂಡು ಕೈಯಲ್ಲಿ ಡ್ರ್ಯಾಗರ್ ಹಿಡಿದುಕೊಂಡು ಹೊರಟು ಹೋದ. ನಂತರ ರಸ್ತೆಯಲ್ಲಿ ಹೋಗುತ್ತಿದ್ದ ಒಂದು ಆಟೋವನ್ನು ಕರೆಸಿಕೊಂಡು ಪ್ರಾಸಾ.2 - ಫರಾನ್ ಮೆಹದಿಯನ್ನು, ಆತನ ಕಟ್ಟಾಗಿದ್ದ ಆತನ ಎಡಗೈ ಬೆರಳನ್ನೂ ಸಹಿತ ತೆಗೆದುಕೊಂಡು ಚಿಕಿತ್ಸೆಗಾಗಿ ಚನ್ನಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಆಗ ವೈದ್ಯರು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಂತಾ ಹೇಳಿದ್ದರಿಂದ, ನಂತರ ಆತನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಹಿಂದಿನ ದಿವಸ ದಿನಾಂಕ

20.01.2019 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ ಪ್ರಾಸಾ.2 - ಫರಾನ್ ಮೆಹದಿಗೂ ಮತ್ತು ಆರೋಪಿ - ಸೈಯದ್ ಜಬೀರ್ ಇಬ್ಬರಿಗೂ ಮೆಹದಿ ನಗರದಲ್ಲಿ ಗಾಂಜಾ ಸೇದುವ ವಿಚಾರ ಗಲಾಟೆಯಾಗಿದ್ದು, ಇದೇ ದ್ವೇಷ ಇಟ್ಟುಕೊಂಡು ಕೊಲೆ ಮಾಡುವ ಉದ್ದೇಶದಿಂದ ಪ್ರಾಸಾ.2 ರವರನ್ನು ಏಕಾಏಕಿ ಅಡ್ಡ ಹಾಕಿ ಅವಾಚ್ಯ ಶಬ್ದಗಳಿಂದ ಬೈದು, ಕೊಲೆ ಮಾಡುವ ಉದ್ದೇಶದಿಂದ ಹಲ್ಲೆ ಮಾಡಿರುತ್ತಾರೆ ಅಂತಾ ನಿಶಾನೆ ಪಿ.1 - ದೂರನ್ನು ಕೊಟ್ಟಿರುತ್ತಾರೆ.

3. ಸದರಿ ದೂರನ್ನು ಪ್ರಾಸಾ.15 – ಬಿ.ಸಿ.ಹರೀಶ್, ಪಿ.ಎಸ್.ಐ., ಚನ್ನಪಟ್ಟಣ ಪೂರ್ವ ಠಾಣೆ ಇವರು ದೂರನ್ನು ಪಡೆದುಕೊಂಡು ತಮ್ಮ ಠಾಣಾ ಮೊಕದ್ದಮೆ ನಂ.6/2020 ಕೇಸು ದಾಖಲು ಮಾಡಿ, ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗೆ ಸಲ್ಲಿಸಿದ್ದು, ನಂತರ ಆರೋಪಿಯ ಪತ್ತೆಗೋಸ್ಕರವಾಗಿ ಚಾಸಾ.9 ರಿಂದ ಚಾಸಾ.11 ಇವರನ್ನು ನೇಮಕ ಮಾಡಿದ್ದು ಸದರಿಯವರು ಆರೋಪಿಯನ್ನು ದಸ್ತಗಿರಿ ಮಾಡಿ ಹಾಜರುಪಡಿಸಿದ್ದು, ನಂತರ ಚಾಸಾ.5 ಮತ್ತು ಚಾಸಾ.6 ರವರನ್ನು ಪಂಚರನ್ನಾಗಿ ಬರಮಾಡಿಕೊಂಡು, ನಂತರ ಘಟನಾ ಸ್ಥಳಕ್ಕೆ ಭೇಟಿ ಕೊಟ್ಟು ಸ್ಥಳವನ್ನು ಚಾಸಾ.1 ರವರು ತೋರಿಸಿದ್ದು, ಸದರಿ ಸ್ಥಳದಲ್ಲಿ ನಿಶಾನೆ ಪಿ.2 – ಮಹಜರ್ ಮಾಡಿ ಎಂ.ಓ.1 - ರಕ್ತಮಿಶ್ರಿತವಲ್ಲದ ಮಣ್ಣು ಮತ್ತು ಎಂ.ಓ.2 - ರಕ್ತಮಿಶ್ರಿತ ಮಣ್ಣನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

4. ನಂತರ ಅದೇ ದಿವಸ ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿದ್ದು, ಆರೋಪಿಯ ಹೇಳಿಕೆಯಲ್ಲಿ ಹಲ್ಲೆಗೆ ಬಳಸಿದಂತ ಡ್ರಾಗರ್‌ನ್ನು ನನ್ನನ್ನು ಕರೆದುಕೊಂಡು

ಹೋದರೆ ತೋರಿಸುತ್ತೇನೆ ಅಂತಾ ಹೇಳಿದ್ದು, ಆ ಪ್ರಕಾರ ಚಾಸಾ.7 ಮತ್ತು ಚಾಸಾ.8 ಇವರನ್ನು ಸ್ಥಳಕ್ಕೆ ಬರಮಾಡಿಕೊಂಡು ಆರೋಪಿಯನ್ನು ಜೀಪ್‌ನಲ್ಲಿ ಕೂರಿಸಿಕೊಂಡು ಆರೋಪಿ ಶೇರವ್ ಸರ್ಕಲ್ ಬಳಿ ಇರುವ ಸರ್ಕಾರಿ ತೋಪಿಗೆ ಕರೆದುಕೊಂಡು ಹೋಗಿ ಡ್ರಾಗರನ್ನು ತೋರಿಸಿದ್ದು, ಅಲ್ಲಿ ಮಧ್ಯಾಹ್ನ 2.30 ರಿಂದ 3.10 ಗಂಟೆ ಸಮಯದಲ್ಲಿ ನಿಶಾನೆ ಪಿ.4 – ಮಹಜರ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖೆಯನ್ನು ಮುಂದುವರೆಸಿ ಚಾಸಾ.12 ಮತ್ತು ಚಾಸಾ.14 ಗಾಯಾಳು ಹೇಳಿಕೆ ಪಡೆಯಲು ವಿಕ್ಟೋರಿಯಾ ಆಸ್ಪತ್ರೆ ಹೋಗಿದ್ದು, ನಂತರ ಆರೋಪಿ ಮುಂದಿನ ತನಿಖೆಗೆ ಅವಶ್ಯಕತೆ ಇಲ್ಲದೇ ಇರುವುದರಿಂದ ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಟ್ಟಿರುತ್ತಾರೆ. ಅಮಾನತ್ತುಪಡಿಸಿಕೊಂಡಂಥ ವಸ್ತುಗಳನ್ನು ಮಾಲುಪಟ್ಟಿಗೆ ಅಳವಡಿಸಿರುತ್ತಾರೆ. ನಂತರ ಮುಂದಿನ ತನಿಖೆಯನ್ನು ಪ್ರಾಸಾ.11/ಚಾಸಾ.18 ರವರಿಗೆ ವಹಿಸಿಕೊಟ್ಟಿರುತ್ತಾರೆ.

5. ಪ್ರಾಸಾ.11 - ಪ್ರಕಾಶ್ ಬಿ.ಕೆ. ಚನ್ನಪಟ್ಟಣ ಪಿಎಸ್‌ಐರವರು ಈ ಕೇಸಿನ ಕಡತವನ್ನು ಪ್ರಾಸಾ.15 ರವರ ಕಡೆಯಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ಸುಹೇಲಾ ಖಾನ್ ಮತ್ತು ಮುಷಾಪಿರ್ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡು, ಎಫ್.ಎಸ್.ಎಲ್ ವರದಿಯನ್ನು ಪಡೆದುಕೊಂಡು, ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡು, ಸಾಕ್ಷಿದಾರ ಹೇಳಿಕೆಯನ್ನು ಪಡೆದುಕೊಂಡ ನಂತರ ತನಿಖೆ ಪೂರ್ಣಗೊಂಡಿದ್ದು ಆರೋಪಿತನ ಮೇಲೆ ಆರೋಪ ಸಾಬೀತಾಗಿದ್ದರಿಂದ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ.

6. ನಂತರ ಸದರಿ ಜೆ.ಎಂ.ಎಫ್.ಸಿ., ಚನ್ನಪಟ್ಟಣ ನ್ಯಾಯಾಲಯವು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿ, ಸಂಜ್ಞೆ ಪಡೆದುಕೊಂಡು ಸಿ.ಸಿ.ನಂ.750/2020 ಕೇಸನ್ನು ನೋಂದಣಿ ಮಾಡಿಕೊಂಡು, ನಂತರ ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಸದರಿ ಆರೋಪಿಯ ವಿರುದ್ಧ ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ನಡೆಯತಕ್ಕಂತಹ ಪ್ರಕರಣವಾಗಿರುವುದರಿಂದ ಮಾನ್ಯ ಜಿಲ್ಲಾ ನ್ಯಾಯಾಲಯಕ್ಕೆ ಕಮಿಟ್ ಮಾಡಿ ಕಳುಹಿಸಿರುತ್ತಾರೆ.

7. ನಂತರ ಸದರಿ ಪ್ರಕರಣ ಮಾನ್ಯ ಜಿಲ್ಲಾ ನ್ಯಾಯಾಲಯಕ್ಕೆ ಬಂದ ನಂತರ ಆರೋಪಿಯನ್ನು ಹಾಜರಪಡಿಸಲು ಬಂಧೀಖಾನೆ ಅಧೀಕ್ಷಕರಿಗೆ ಮಾಹಿತಿ ನೀಡಿದ್ದು ಆ ಪ್ರಕಾರ ಆರೋಪಿಯನ್ನು ಹಾಜರುಪಡಿಸಿದ್ದು, ನಂತರ ಆರೋಪಿ ಜಾಮೀನು ಪಡೆದುಕೊಂಡಿರುತ್ತಾರೆ. ನಂತರ ನಮ್ಮ ಪೂರ್ವ ನ್ಯಾಯಾಧೀಶರು ದೋಷಾರೋಪಣಾ ಪಟ್ಟಿಯನ್ನು ಪರಿಶೀಲಿಸಿ, ದೋಷಾರೋಪಣೆ ರಚನೆ ಮಾಡಲು ಸಾಕಷ್ಟು ಕಾರಣಗಳಿದ್ದು, ದೋಷಾರೋಪಣೆ ರಚನೆ ಮಾಡಿ, ಓದಿ ಹೇಳಿದಾಗ ಆರೋಪಿ ಎಲ್ಲಾ ವಿಷಯಗಳನ್ನು ತಿಳಿದುಕೊಂಡು ತಾನು ಯಾವುದೇ ತಪ್ಪು ಮಾಡಿರುವುದಿಲ್ಲ ವಿಚಾರಣೆ ಆಗಬೇಕು ಅಂತ ನ್ಯಾಯಾಲಯಕ್ಕೆ ತಿಳಿಸಿರುತ್ತಾರೆ.

8. ನಂತರ ಅಭಿಯೋಜಕ ಪಕ್ಷವು ಆರೋಪಿಯ ಮೇಲಿರುವ ಆಪಾದನೆಯನ್ನು ರುಜುವಾತುಪಡಿಸಲು ಪ್ರಾಸಾ.1 ರಿಂದ ಪ್ರಾಸಾ.15 ಸಾಕ್ಷಿಗಳನ್ನು ವಿಚಾರಣೆ ಮಾಡಿ, ನಿಶಾನೆ ಪಿ.1 ರಿಂದ ಪಿ.11 ದಾಖಲೆಗಳನ್ನು ಹಾಗೂ ಮುದ್ದೆಮಾಲು 1 ರಿಂದ 3 ನ್ನು ಗುರುತಿಸಿಕೊಂಡಿರುತ್ತಾರೆ.

9. ಅಭಿಯೋಜಕ ಸಾಕ್ಷಿ ಮುಗಿದ ನಂತರ ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಹೇಳಿಕೆಯನ್ನು ಓದಿ ಹೇಳಲಾಗಿ ಆರೋಪಿ ಸದರಿ ಹೇಳಿಕೆಯಲ್ಲಿ ಇರತಕ್ಕಂತಹ ಎಲ್ಲಾ ವಿಷಯಗಳನ್ನು ಸ್ಪಷ್ಟವಾಗಿ ಅಲ್ಲಗಳೆದಿರುತ್ತಾರೆ, ಮಾನ್ಯ ನ್ಯಾಯಾಲಯಕ್ಕೆ ಹೇಳುವುದಕ್ಕೆ ಏನಾದರೂ ಹೇಳುವುದು ಇದೇಯಾ ಅಂತ ಕೇಳಿದಾಗ ಘಟನೆಯಾದ ದಿವಸ ರಾತ್ರಿ 9.00 ಗಂಟೆ ಕೆಲವರೊಂದಿಗೆ ಗಾಂಜಾ ಸೇದುತ್ತಿದ್ದರು, ಅದನ್ನು ಅವರ ಮನೆಯಲ್ಲಿ ತಿಳಿಸಿದ, ನಂತರ ರಾತ್ರಿ 9.30 ಗಂಟೆಗೆ ನನ್ನ ತಾಯಿಯನ್ನು ಕರೆದುಕೊಂಡು ಕೆಂಗೇರಿಗೆ ಹೋದೆ, ನಾನು ಸ್ಥಳದಲ್ಲಿ ಇರಲಿಲ್ಲ. ನಾನು, ಅವನು ಗಾಂಜಾ ಸೇದುವುದನ್ನು ತಿಳಿಸಿದ್ದೆ, ಸುಳ್ಳು ಕೇಸು ಮಾಡಿದ್ದಾರೆ ಅಂತಾ ಹೇಳಿಕೆ ಕೊಟ್ಟಿರುತ್ತಾರೆ. ತಮ್ಮ ಪರವಾಗಿ ಯಾವುದೇ ಸಾಕ್ಷಿ ಇಲ್ಲ ಅಂತಾ ತಿಳಿಸಿರುತ್ತಾರೆ.

10. ಉಭಯ ವಕೀಲರ ವಾದ ಕೇಳಲಾಯಿತು.

11. ಉಭಯ ವಕೀಲರ ವಾದ ವಿವಾದವನ್ನು ಪರಿಶೀಲಿಸಲಾಗಿ ನ್ಯಾಯಾಲಯಕ್ಕೆ ಈ ಕೆಳಕಂಡಂತಹ ಅಂಶಗಳು ಚರ್ಚೆಗೆ ಬಂದಿರುತ್ತವೆ.

1. ಅಭಿಯೋಜಕ ಪಕ್ಷವು ಯುಕ್ತ ಸಂಶಯಗಳಿಂದಾಚೆ ಚನ್ನಪಟ್ಟಣ ಟೌನ್, ಕಲಾನಗರದಲ್ಲಿರುವ ಅಲಾಮಿನ್ ಶಾಲೆಯ ಮುಖ್ಯ ರಸ್ತೆಯ 1 ನೇ ಕ್ರಾಸ್ ಖಮ್ರುಲ್ಲಾ ಖಾನ್ ರವರ ಮನೆಯ ಮುಂಭಾಗದ ರಸ್ತೆಯಲ್ಲಿ ದಿನಾಂಕ 20.01.2020 ರಂದು ರಾತ್ರಿ 11.00 ಗಂಟೆ ಸಮಯದಲ್ಲಿ ಚಾಸಾ.1 ರಿಂದ ಚಾಸಾ.3 ರವರು, ಚಾಸಾ.2 ರವರ ಬಾಬ್ತು ಮೋಟಾರ್ ಬೈಕನ್ನು ಚಾಲನೆ ಮಾಡಿಕೊಂಡು ಚಾಸಾ.1 ಮತ್ತು ಚಾಸಾ.3 ರವರನ್ನು ಬೈಕಿನಲ್ಲಿ ಕೂರಿಸಿಕೊಂಡು

ರಾಮನಗರದಿಂದ ಬಂದು ವಾಪಸ್ಸು ಮನೆಗೆ ಹೋಗುವಾಗ ಆರೋಪಿ ಅವರ ಬೈಕನ್ನು ಅಡ್ಡಹಾಕಿ ಮುಂದೆ ಹೋಗದಂತೆ ತಡೆ ನಿಲ್ಲಿಸಿ ಪ್ರತಿಬಂಧಿಸಿದ್ದರು ಅಂತಾ ಭಾ.ದಂ.ಸಂ.ಕಲಂ.341 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆ ಅಂತಾ ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ರುಜುವಾತುಪಡಿಸಿರುತ್ತಾರೆಯೇ ?

2. ಅಭಿಯೋಜಕ ಪಕ್ಷವು ಯುಕ್ತ ಸಂಶಯಗಳಿಂದಾಚೆ ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿ ಹಳೆಯ ದ್ವೇಷದಿಂದ ತನ್ನ ಕತ್ತಿನಲ್ಲಿ ನೇತು ಹಾಕಿಕೊಂಡಿದ್ದ ಕಪ್ಪು ಬಣ್ಣದ ಬ್ಯಾಗಿನಿಂದ ಒಂದು ಡ್ರಾಗರ್‌ನ್ನು ತೆಗೆದು ಚಾಸಾ.2 ರವರ ಮೇಲೆ ಹಲ್ಲೆ ಮಾಡಿದ್ದರಿಂದ ಅವರ ಎಡಗೈ ಬೆರಳು ಕಟ್ಟಾಗಿ ತೀವ್ರ ಸ್ವರೂಪದ ಗಾಯವನ್ನುಂಟು ಆಗಿರುತ್ತದೆ ಅಂತಾ ಭಾ.ದಂ.ಸಂ.ಕಲಂ.326 ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆ ಅಂತಾ ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ರುಜುವಾತುಪಡಿಸಿರುತ್ತಾರೆಯೇ ?

3. ಅಭಿಯೋಜಕ ಪಕ್ಷವು ಯುಕ್ತ ಸಂಶಯಗಳಿಂದಾಚೆ ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಚಾಸಾ.1 ಮತ್ತು ಚಾಸಾ.3 ರವರು ಆರೋಪಿಯನ್ನು ಹಿಡಿಯಲು ಹೋದಾಗ ಆರೋಪಿ ಅವಾಚ್ಯ ಶಬ್ದಗಳಿಂದ ಬೈದು ಓಡಿ ಹೋಗಿರುತ್ತಾರೆ ಅಂತಾ ಭಾ.ದಂ.ಸಂ.ಕಲಂ.504 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆ ಅಂತಾ ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ರುಜುವಾತುಪಡಿಸಿರುತ್ತಾರೆಯೇ ?

4. ಅಭಿಯೋಜಕ ಪಕ್ಷವು ಯುಕ್ತ ಸಂಶಯಗಳಿಂದಾಚೆ ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ ಆರೋಪಿ ಹಳೆಯ ದ್ವೇಷದಿಂದ ತನ್ನ ಕತ್ತಿನಲ್ಲಿ ನೇತುಹಾಕಿಕೊಂಡಿದ್ದ ಕಪ್ಪು ಬಣ್ಣದ ಬ್ಯಾಗಿನಿಂದ ಒಂದು ಡ್ರ್ಯಾಗರನ್ನು ತೆಗೆದು ಚಾಸಾ.2 ರವರನ್ನು ಕೊಲೆ ಮಾಡುವ ಉದ್ದೇಶದಿಂದ ಅವರ ಕುತ್ತಿಗೆಯ ಬಳಿ ಹೊಡೆಯಲು ಹೋದಾಗ ಚಾಸಾ.2 ರವರು ತಮ್ಮ ಎಡಗೈಯನ್ನು ಕೊಟ್ಟಾಗ ಆತನ ಎಡಗೈ ಹೆಬ್ಬೆರಳಿಗೆ ರಕ್ತಗಾಯವಾಗಿ ಹೆಬ್ಬೆರಳು ಕಟ್ಟಾಗಿ ಬಿದ್ದಿದ್ದು, ಆರೋಪಿ ಚಾಸಾ.2 ರವರನ್ನು ಕೊಲೆ ಮಾಡಲು ಪ್ರಯತ್ನಪಟ್ಟಿರುತ್ತಾರೆ ಅಂತಾ ಭಾ.ದಂ.ಸಂ.ಕಲಂ.307 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧ ಮಾಡಿರುತ್ತಾರೆ ಅಂತ ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ರುಜುವಾತುಪಡಿಸಿರುತ್ತಾರೆಯೇ ?

5. ಯಾವ ಆದೇಶ ?

12. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

| | |
|---|---|
| ಅಂಶ ಸಂಖ್ಯೆ 1 : | ಸಕಾರಾತ್ಮಕವಾಗಿ |
| ಅಂಶ ಸಂಖ್ಯೆ 2 : | ಸಕಾರಾತ್ಮಕವಾಗಿ |
| ಅಂಶ ಸಂಖ್ಯೆ 3 : | ಸಕಾರಾತ್ಮಕವಾಗಿ |
| ಅಂಶ ಸಂಖ್ಯೆ 4 : | ನಕಾರಾತ್ಮಕವಾಗಿ |
| ಅಂಶ ಸಂಖ್ಯೆ 5 : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ: |

:: <u>ಕಾರಣಗಳು</u> ::

13. <u>ಅಂಶ ಸಂಖ್ಯೆ **1** ರಿಂದ **3:**</u> ನ್ಯಾಯಾಲಯದ ಅನುಕೂಲಕ್ಕೋಸ್ಕರವಾಗಿ ಎಲ್ಲಾ ಅಂಶಗಳನ್ನು ಏಕಕಾಲಕ್ಕೆ ತೆಗೆದುಕೊಳ್ಳಲಾಗಿದೆ.

14. ಸರ್ಕಾರಿ ಅಭಿಯೋಜಕರು ವಾದ ಮಾಡುತ್ತಾ ಆರೋಪಿ ಯಾವುದೇ ದ್ವೇಷ ಇಟ್ಟುಕೊಂಡು ಪ್ರಾಸಾ.1 ರಿಂದ 3 ಇವರು ಬೈಕ್‌ನಲ್ಲಿ ಬರುವಾಗ ತನ್ನ ಬ್ಯಾಗಿನಲ್ಲಿ ಎಂ.ಒ.3 - ಡ್ರಾಗರನ್ನು ತೆಗೆದುಕೊಂಡು ರಾತ್ರಿ 11.00 ಗಂಟೆಯ ಸಮಯದಲ್ಲಿ ಬೈಕನ್ನು ಅಡ್ಡಗಟ್ಟಿ ಮುಂದೆ ಹೋಗದಂತೆ ತಡೆದು, ಪ್ರಾಸಾ.2 ಇವರಿಗೆ ನೀನು ನಿಮ್ಮ ಅಣ್ಣನ ಕಡೆಯಿಂದ ಜಗಳ ಮಾಡಿಸಿದ್ದೀಯಾ ಅಂತಾ ಹೇಳಿ ಬ್ಯಾಗಿನಿಂದ ಡ್ರಾಗರನ್ನು ತೆಗೆದುಕೊಂಡು ತಲೆಗೆ ಹೊಡೆಯಲು ಹೋದಾಗ ಆಗ ಪ್ರಾಸಾ.2 ತಪ್ಪಿಸಿಕೊಳ್ಳಲು ಎಡಗೈ ಮುಂದೆ ತಂದಾಗ ಆ ಏಟು ಎಡಗೈ ಹೆಬ್ಬೆರಳಿಗೆ ಬಿದ್ದು ತುಂಡಾಗಿದ್ದು, ಸದರಿ ಆರೋಪಿ ಉದ್ದೇಶಪೂರ್ವಕವಾಗಿ ಪ್ರಾಸಾ.2 ರವರನ್ನು ಕೊಲೆ ಮಾಡಬೇಕೆಂಬ ಉದ್ದೇಶದಿಂದ ಆಯುಧ ಸಮೇತ ಬಂದು ಅವ್ಯಾಚ ಶಬ್ದಗಳಿಂದ ಬೈದು ಕೊಲೆ ಮಾಡಲು ಪ್ರಯತ್ನಪಟ್ಟಿದ್ದು, ಇದಕ್ಕೆ ಸಂಬಂಧಪಟ್ಟಂತೆ ಅಭಿಯೋಜಕ ಪಕ್ಷವು ಸಾಕ್ಷಿ, ದಾಖಲೆಗಳ ಮುಖಾಂತರ ರುಜುವಾತುಪಡಿಸಿರುವುದರಿಂದ ಆರೋಪಿಗೆ ಶಿಕ್ಷೆ ವಿಧಿಸಬೇಕೆಂದು ವಾದ ಮಂಡಿಸಿರುತ್ತಾರೆ.

15. ಆರೋಪಿ ಪರ ವಕೀಲರ ಮುಖ್ಯ ವಾದ, ಪ್ರಾಸಾ.2 ರವರ ಅಣ್ಣ ಮತ್ತು ಇನ್ನೊಬ್ಬರು ಗಾಂಜಾ ಸೇವಿಸುತ್ತಿದ್ದು, ಇದನ್ನು ಆರೋಪಿ ನೋಡಿದ್ದು, ಈ ವಿಚಾರ ಸಲುವಾಗಿ ಆರೋಪಿ, ಪ್ರಾಸಾ.2 ಇವರ ಮನೆಗೆ ಹೇಳಿದ್ದು, ಈ ಹೇಳಿಕೆಯನ್ನು ಕೇಳಿದ ನಂತರ ಮನೆಯವರೆಲ್ಲರೂ ಸಹಿತ ಪಿರ್ಯಾದಿಯ ಅಣ್ಣನಿಗೆ ಬೈದಿದ್ದು, ನಂತರ ಪಿರ್ಯಾದಿಯ ಅಣ್ಣ, ಅವರೆಲ್ಲರೂ ಸೇರಿಕೊಂಡು ಆರೋಪಿಗೆ ತೊಂದರೆ ಕೊಟ್ಟಿದ್ದು ಇದಕ್ಕೆಲ್ಲಾ ಕಾರಣ ಆರೋಪಿಯೇ ಇರುತ್ತಾರೆ ಅಂತಾ ಪ್ರಾಸಾ.2 ಇವರು ಹೇಳಿದ್ದರಿಂದ

ಆರೋಪಿಗೆ ತೊಂದರೆ ಉಂಟು ಮಾಡಿದ್ದರಿಂದ ಅದಕ್ಕೆ ಸಿಟ್ಟಾಗಿ ಆರೋಪಿ ಪಾಸಾ.2 ಇವರ ಮೇಲೆ ಹಲ್ಲೆ ಮಾಡಿಲ್ಲದಿದ್ದರೂ ಸಹಿತ ಪ್ರಾಸಾ.2 ಈತನು ಮಿಷಿನ್‌ನಲ್ಲಿ ಕೈ ಇಟ್ಟು ಬೆರಳು ಕಟ್ಟಾಗಿದ್ದು, ಅದರ ದುರುಪಯೋಗ ಪಡೆದುಕೊಂಡು ವಿನಾಕಾರಣ ಆರೋಪಿಯ ವಿರುದ್ಧ ಸುಳ್ಳು ಕೇಸು ದಾಖಲು ಮಾಡಿರುತ್ತಾರೆ. ಅಭಿಯೋಜಕ ಪಕ್ಷವು ಸಾಕ್ಷಿ, ದಾಖಲೆಗಳ ಮುಖಾಂತರ ಆರೋಪಿ ಅಪರಾಧ ಮಾಡಿರುತ್ತಾನೆ ಅಂತಾ ನಿಸ್ಸಂಶಯವಾಗಿ ರುಜುವಾತುಪಡಿಸಲು ವಿಫಲವಾಗಿರುವುದರಿಂದ ಆರೋಪಿಯನ್ನು ಬಿಡುಗಡೆ ಮಾಡಬೇಕೆಂದು ವಾದ ಮಂಡಿಸಿರುತ್ತಾರೆ.

16. ಉಭಯ ವಕೀಲರ ವಾದವನ್ನು ಪರಿಶೀಲಿಸಲಾಗಿ, <u>ಭಾರತೀಯ ದಂಡ ಸಂಹಿತೆ ಕಲಂ.341, 504, 326 ರ</u> ಅಡಿಯಲ್ಲಿ ಆರೋಪಿ ಅಪರಾಧ ಮಾಡಿರುತ್ತಾರೆ ಅಂತಾ ರುಜುವಾತುಪಡಿಸಲು ಅಭಿಯೋಜಕ ಪಕ್ಷವು ಈ ಕೆಳಕಂಡ ಅಂಶಗಳನ್ನು ರುಜುವಾತುಪಡಿಸಬೇಕಾಗುತ್ತದೆಃ

1. ಆರೋಪಿ, ಪ್ರಾಸಾ.1 ರಿಂದ ಪ್ರಾಸಾ.3 ಇವರು ಬೈಕ್‌ನಲ್ಲಿ ಬರುತ್ತಿರುವಾಗ ಅವರನ್ನು ಮುಂದು ಹೋಗದಂತೆ ತಡೆದು ನಿಲ್ಲಿಸಿರುತ್ತಾನೆ ಅನ್ನುವ ಅಂಶ ಎನ್ನುವುದರ ಬಗ್ಗೆ,
2. ನಂತರ ತಡೆದು ನಿಲ್ಲಿಸಿದ ನಂತರ ಸದರಿಯವರ ಜೊತೆ ಏಕಾಏಕಿ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು, ಆ ಶಬ್ದದಿಂದ ಪ್ರಾಸಾ.1 ರಿಂದ ಪ್ರಾಸಾ.3 ರವರ ಮನಸ್ಸಿಗೆ ನೋವುಂಟಾಗಿರುತ್ತದೆ ಅನ್ನುವುದನ್ನು,
3. ನಂತರ ಆರೋಪಿ ಪ್ರಾಸಾ.1 ರಿಂದ ಪ್ರಾಸಾ.3 ರವರನ್ನು ಬೈಕ್‌ನಲ್ಲಿ ಹೋಗುವುದನ್ನು ತಡೆದು ನಿಲ್ಲಿಸಿ ಪ್ರಾಸಾ.2 ಇವರ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಎಂ.ಒ.3 - ಡ್ರಾಗರ್‌ನಿಂದ ಪ್ರಾಸಾ.2 ರವರ ಎಡಗೈ ಹೆಬ್ಬೆರಳಿಗೆ ಹೊಡೆದು

ಹೆಬ್ಬೆರಳು ಕಟ್ಟಾಗಿದ್ದು, ಇದಕ್ಕೆ ಆರೋಪಿಯೇ ಕಾರಣ ಇರುತ್ತಾನೆ ಅಂತಾ ಅಭಿಯೋಜಕ ಪಕ್ಷವು ಈ ಅಂಶಗಳನ್ನು ರುಜುವಾತುಪಡಿಸಬೇಕಾಗುತ್ತದೆ.

17. <u>ಸಾಕ್ಷಿಗಳ ವಿಶ್ಲೇಷಣೆಯ ಬಗ್ಗೆ:</u> <u>ದೂರುದಾರ, ಮಹಜರ್ ಸಾಕ್ಷಿ ಮತ್ತು ಪ್ರತ್ಯಕ್ಷ ಸಾಕ್ಷಿಯ ಬಗ್ಗೆ:</u> ಪ್ರಾಸಾ.1/ಚಾಸಾ.1 – ಸಿಮ್ರಾನ್, ನಿಶಾನೆ ಪಿ.1 ದೂರುದಾರಾಗಿದ್ದು, ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 21-01-2020 ರಂದು ರಾತ್ರಿ 11.00 ಗಂಟೆ ಸಮಯದಲ್ಲಿ ನಾನು, ಪ್ರಾಸಾ.2 - ಫರಾದ್ ಹಾಗೂ ಪ್ರಾಸಾ.3 - ಸುಹೇಲಾ ಖಾನ್ ಡಿಯೋ ದ್ವಿಚಕ್ರ ವಾಹನದಲ್ಲಿ ರಾಮನಗರದಿಂದ ಚನ್ನಪಟ್ಟಣಕ್ಕೆ ಹೋಗುತ್ತಿದ್ದು, ಸದರಿ ವಾಹನವನ್ನು ಪ್ರಾಸಾ.2 ರವರು ಚಲಾಯಿಸುತ್ತಿದ್ದು ಆಲಾಮಿನ್ ಶಾಲೆಯ ರಸ್ತೆಯಲ್ಲಿ ಆರೋಪಿ ನಡೆದುಕೊಂಡು ಬರುತ್ತಿದ್ದು, ಆಗ ಆರೋಪಿ ನಮ್ಮ ಬೈಕನ್ನು ನಿಲ್ಲಿಸುವಂತೆ ಹೇಳಿದ್ದರಿಂದ ಬೈಕನ್ನು ಮುಂದೆ ಹೋಗದಂತೆ ತಡೆದಿದ್ದರಿಂದ ಬೈಕನ್ನು ನಿಲ್ಲಿಸಿರುತ್ತಾರೆ. ನಂತರ ಆರೋಪಿ ತನ್ನ ಬ್ಯಾಗಿನಲ್ಲಿರುವ ಚಾಕು(ಡ್ರಾಗರ)ನ್ನು ತೆಗೆದುಕೊಂಡು ಫರಾದ್ ಈತನ ಎಡಗೈ ಅಂಗೈಗೆ ಹೊಡೆದಿದ್ದು, ಇದರಿಂದ ಆತನ ಎಡಗೈ ಹೆಬ್ಬೆರಳು ತುಂಡಾಗಿ ಬಿದ್ದಿದ್ದು ಚಾಕುವನ್ನು ತೆಗೆದುಕೊಂಡು ಸ್ಥಳದಿಂದ ಹೊರಟು ಹೋದ. ಸ್ಥಳದಲ್ಲಿ ಬಿದ್ದಿದ್ದ ಫರಾದ್‌ನ ಎಡಗೈ ಹೆಬ್ಬೆರಳನ್ನು ತೆಗೆದುಕೊಂಡು ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋದಾಗ ಆಸ್ಪತ್ರೆಯಲ್ಲಿ ಆಗುವುದಿಲ್ಲ, ಬೆಂಗಳೂರಿನ ಕರೆದುಕೊಂಡು ಹೋಗಿ ಅಂತ ಹೇಳಿದರು. ನಂತರ ಬೆಂಗಳೂರು ಆಸ್ಪತ್ರೆಗೆ ಹೋಗಿ ನಿಶಾನೆ ಪಿ.1 - ದೂರನ್ನು ರಾತ್ರಿ ನೀಡಿದ್ದು, ನಿಶಾನೆ ಪಿ.1(ಎ) ತನ ಸಹಿ ಅಂತಾ ಗುರಿತಿಸಿರುತ್ತಾರೆ. ನಂತರ ಮಾರನೆ ದಿವಸ ಪೊಲೀಸರು ಸ್ಥಳಕ್ಕೆ ಬಂದಾಗ ಸ್ಥಳವನ್ನು ತೋರಿಸಿದ್ದು, ಸ್ಥಳದಲ್ಲಿ ಪೊಲೀಸರು ನಿಶಾನೆ

ಪಿ.2 ಮಹಜರ್ ಮಾಡಿದ್ದು, ರಕ್ತವಾದ ಮಣ್ಣು ಮತ್ತು ರಕ್ತವಲ್ಲದ ಮಣ್ಣನ್ನು ಸಹಿತ ತೆಗೆದುಕೊಂಡು ಹೋಗಿದ್ದು, ನಿಶಾನೆ ಪಿ.2 ಮಹಜರಿಗೆ ನಾನು ಸಹಿ ಮಾಡಿರುತ್ತೇನೆ ಅಂತಾ ಸಾಕ್ಷಿ ನುಡಿದಿರುತ್ತಾರೆ. ಈ ಸಾಕ್ಷಿ ರಾತ್ರಿ 11.00 ಗಂಟೆಗೆ ಗಲಾಟೆ ಆಗಿರುವುದರಿಂದ, ಆರೋಪಿ ಕೈಯಲ್ಲಿದ್ದ ಚಾಕುವನ್ನು ಗುರುತಿಸಲು ಆಗಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಈ ಸಾಕ್ಷಿಯನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಫರಾದ್ ಇವರ ಅಣ್ಣ ಗಾಂಜಾ ಸೇವನೆ ಮಾಡುತ್ತಿದ್ದು, ಈ ವಿಚಾರವನ್ನು ಆರೋಪಿ ಫರಾದ್‌ರವರ ಮನೆಯಲ್ಲಿ ಹೇಳಿದ್ದರಿಂದ ಅವರ ಮನೆಯವರು ಫರಾದ್‌ನ ಅಣ್ಣನಿಗೆ ಹೊಡೆದಿದ್ದು, ಈ ಘಟನೆಯಿಂದಾಗಿ ಫರಾದ್ ಮತ್ತು ಅವರ ಅಣ್ಣನ ಇಬ್ಬರು ಆರೋಪಿಯ ಮೇಲೆ ಕೋಪ ಮಾಡಿಕೊಂಡು ಮಾತು ಬಿಟ್ಟಿರುತ್ತಾರೆ ಅಂತಾ ಕೇಳಿದ ಪ್ರಶ್ನೆಯನ್ನು ಸ್ಪಷ್ಟವಾಗಿ ಸಾಕ್ಷಿ ಅಲ್ಲಗಳೆದಿರುತ್ತಾರೆ. ಈ ಸಾಕ್ಷಿಯನ್ನು ಪರಿಶೀಲಿಸಲಾಗಿ, ಆ ದಿವಸ ಆರೋಪಿ ಬಂದಿಲ್ಲ, ಎಂ.ಒ.3 ಡ್ರಾಗರ್‌ನಿಂದ ಪ್ರಾಸಾ.2 ಇವರ ಎಡಗೈ ಹೆಬ್ಬೆರಳಿಗೆ ಹೊಡೆದಿಲ್ಲ ಎಂಬುದರ ಬಗ್ಗೆ ಎಲ್ಲೂ ಸಹಿತ ಪಾಟೀ ಸವಾಲಿನಿಂದ ಹೊರಬಂದಿರುವುದಿಲ್ಲ. ಆರೋಪಿ ಪರ ವಕೀಲರ ಮುಖ್ಯ ವಾದ, ಚನ್ನಪಟ್ಟಣ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ ಅಂತಾ ಹೇಳಿದ್ದು ಚನ್ನಪಟ್ಟಣ ಆಸ್ಪತ್ರೆಯಲ್ಲಿ ದಾಖಲಾಗಿದ್ದರ ಬಗ್ಗೆ ವೈದ್ಯಕೀಯ ದಾಖಲೆ ಹಾಜರುಪಡಿಸಿಲ್ಲ ಹಾಗೂ ಸದರಿ ವೈದ್ಯರನ್ನು ಸಾಕ್ಷಿ ಮಾಡಿಸಿರುವುದಿಲ್ಲ ಅಂತಾ ವಾದ ಮಾಡಿದ್ದನ್ನು ಪರಿಶೀಲಿಸಲಾಗಿ, ಇದಕ್ಕೆ ಸಂಬಂಧಪಟ್ಟಂತೆ ಸಾಕ್ಷಿ ತನ್ನ ಮುಖ್ಯ ವಿಚಾರಣಾ ಪ್ಯಾರಾ3 ರಲ್ಲಿ ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋಗಿ ತೋರಿಸಿದಾಗ ಆಗುವುದಿಲ್ಲ. ಬೆಂಗಳೂರಿಗೆ ಕರೆದುಕೊಂಡು ಹೋಗಿ ಅಂತಾ ಹೇಳಿರುತ್ತಾರೆ ವಿನಃ ಅಲ್ಲಿ ದಾಖಲು ಮಾಡಿ

ಪ್ರಥಮ ಚಿಕಿತ್ಸೆ ನೀಡಿರುವುದಿಲ್ಲ ಕಾರಣ ಬೆರಳು ಕಟ್ಟಾಗಿರುವುದರಿಂದ ಆ ಬೆರಳನ್ನು ಜೋಡಿಸಬೇಕಾಗಿರುವುದರಿಂದ ತಕ್ಷಣವೇ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆದ್ದರಿಂದ ಈ ಸಾಕ್ಷಿ ಪ್ರತ್ಯಕ್ಷ ಸಾಕ್ಷಿಯಾಗಿದ್ದು, ಈ ಸಾಕ್ಷಿಯನ್ನು ಪಾಟೀ ಸವಾಲು ಮಾಡಿದರೂ ಸಹಿತ, ಎಲ್ಲೂ ಸಹಿತ ಆರೋಪಿ ಬಂದಿಲ್ಲ. ಎಂ.ಒ.3 ಚಾಕುವಿನಿಂದ ಪ್ರಾಸಾ.2 ಇವರ ಮೇಲೆ ಹಲ್ಲೆ ಮಾಡಿರುವುದಿಲ್ಲ ಅಂತಾ ಎಲ್ಲೂ ಸಹಿತ ಪಾಟೀ ಸವಾಲಿನಿಂದ ಹೊರ ಬಂದಿರುವುದಿಲ್ಲ.

18. <u>ಪ್ರಾಸಾ.**5 – ಲಿಯಾಕತ್, ನಿಶಾನೆ ಪಿ.2 – ಮಹಜರ್ ಸಾಕ್ಷಿಯಾಗಿದ್ದು,**</u> ಪ್ರಾಸಾ.1 ರವರು ಮಹಜರ್ ಸಾಕ್ಷಿಯಾಗಿದ್ದು, ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಅಂತಾ ಉತ್ತರಿಸಿದ್ದು, ಅದೇ ಪ್ರಕಾರ ಪ್ರಾಸಾ.5 ಇವರೂ ಸಹಿತ ನಿಶಾನೆ ಪಿ.2 ಮಹಜರ್ ಸಾಕ್ಷಿಯಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ <u>ದಿನಾಂಕ 21-01-2020 ರಂದು ಆಲ್ ಅಮಿನ್ ಶಾಲೆಯ ರಸ್ತೆ ಹತ್ತಿರ ಪೊಲೀಸರು ಮಹಜರ್ ಮಾಡಿದರು. ಅಲ್ಲಿ ಬಿದ್ದಿದ್ದ ರಕ್ತವಾದ ಮಣ್ಣು ಮತ್ತು ರಕ್ತವಲ್ಲದ ಮಣ್ಣನ್ನು ಡಬ್ಬಿಯಲ್ಲಿ ಸಂಗ್ರಹಿಸಿ ನಿಶಾನೆ ಪಿ.2 ಮಹಜರ್ ಮಾಡಿ ಸದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ</u>. ಈ ಸಾಕ್ಷಿ ತನ್ನ ಪಾಟೀ ಸವಾಲಿನಲ್ಲಿ ಮಹಜರಿಗೆ ಬೇರೆ ಯಾರ್ಯಾರು ಸಹಿ ಮಾಡಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ. ಆದರೆ, ಮಹಜರಿನಲ್ಲಿ ಬರೆದಂಥ ವಿಚಾರ ಈ ಸಾಕ್ಷಿಗೆ ಗೊತ್ತಿರುತ್ತದೆ. ಅದೇ ಪ್ರಕಾರ <u>ಪ್ರಾಸಾ.6 - ಫರೀದ್ ಖಾನ್</u> ಇವರು ನಿಶಾನೆ ಪಿ.2 ರ ಮಹಜರ್ ಸಾಕ್ಷಿಯಾಗಿದ್ದು, ಈ ಸಾಕ್ಷಿ ತನ್ನ ಸಾಕ್ಷಿಯಲ್ಲಿ <u>ದಿನಾಂಕ 21-01-2020 ರಂದು ಮಧ್ಯಾಹ್ನ 1-30 ಗಂಟೆಯ ಸಮಯದಲ್ಲಿ ಪೊಲೀಸರು ಘಟನಾ ಸ್ಥಳಕ್ಕೆ ಬಂದಿದ್ದು, ನಿಶಾನೆ ಪಿ.2 – ಮಹಜರ್ ಮಾಡಿ</u>

ರಕ್ತವಾಗಿದ್ದ ಮಣ್ಣು ಮತ್ತು ಬೇರೆ ಮಣ್ಣನ್ನು ತೆಗೆದುಕೊಂಡು ಹೋಗಿದ್ದರ ಬಗ್ಗೆ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಅಂತಾ ಸಾಕ್ಷಿ ನುಡಿದಿರುತ್ತಾರೆ. ಈ ಸಾಕ್ಷಿಯನ್ನೂ ಸಹಿತ ಪಾಟೀ ಸವಾಲು ಮಾಡಿದರೂ ಸಹಿತ ಪೊಲೀಸರು ಸ್ಥಳಕ್ಕೆ ಬಂದಿಲ್ಲ, ಸ್ಥಳದಲ್ಲಿ ನಿಶಾನೆ ಪಿ.2 - ಮಹಜರ್ ಮಾಡಿಲ್ಲ ಅಂತಾ ಎಲ್ಲೂ ಸಹಿತ ಪಾಟೀ ಸವಾಲಿನಿಂದ ಹೊರಬಂದಿರುವುದಿಲ್ಲ. ಆದ್ದರಿಂದ ನಿಶಾನೆ ಪಿ.2 - ಮಹಜರನ್ನು ಪ್ರಾಸಾ.1, 5 ಮತ್ತು 6 ಇವರ ಮುಖಾಂತರ ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ರುಜುವಾತುಪಡಿಸಿರುತ್ತದೆ.

19. ಗಾಯಾಳು ಸಾಕ್ಷ್ಯದ ಬಗ್ಗೆ: ಪ್ರಾಸಾ.2 - ಫರಾನ್ ಮೆಹದಿ ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 21-01-2020 ರಂದು ರಾತ್ರಿ 11.00 ಗಂಟೆಯ ಸಮಯದಲ್ಲಿ ನಾನು ಪ್ರಾಸಾ.1 - ಸಿಮ್ರಾನ್ ಹಾಗೂ ಪ್ರಾಸಾ.3 - ಸುಹೇಲಾ ಖಾನ್ ಡಿಯೋ ದ್ವಿಚಕ್ರ ವಾಹನದಲ್ಲಿ ರಾಮನಗರದಿಂದ ಚನ್ನಪಟ್ಟಣದ ನಮ್ಮ ಮನೆಗೆ ಹೋಗುತ್ತಿದ್ದು, ಪ್ರಾಸಾ.3 - ಸುಹೇಲ್ ಖಾನ್ ಇವರು ಬೈಕನ್ನು ಓಡಿಸುತ್ತಿದ್ದು, ಆಲಾಮಿನ್ ಶಾಲೆಯ ರಸ್ತೆಯ ಹತ್ತಿರ ಹೋಗುತ್ತಿದ್ದಾಗ ಎದುರು ಭಾಗದಿಂದ ಆರೋಪಿ ನಡೆದುಕೊಂಡು ಬಂದಿದ್ದು, ಬೈಕನ್ನು ಅಡ್ಡ ಹಾಕಿ ತನ್ನ ಬ್ಯಾಗನಲಿದ್ದ ಚಾಕುವನ್ನು ತೆಗೆದುಕೊಂಡು ನನ್ನ ಎಡಗೈನ ಹೆಬ್ಬೆರಳಿಗೆ ಹೊಡೆದಿದ್ದು ಇದರಿಂದ ನನ್ನ ಎಡಗೈ ಹೆಬ್ಬೆರಳು ತುಂಡಾಗಿ ಕೆಳಗೆ ಬಿದ್ದಿದ್ದು, ಆರೋಪಿ ಚಾಕುವನ್ನು ತೆಗೆದುಕೊಂಡು ಸ್ಥಳದಿಂದ ಓಡಿ ಹೋದನು. ನಂತರ ನನ್ನ ಸ್ನೇಹಿತರು ನನ್ನನ್ನು ಚನ್ನಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ನಂತರ ಅವರು ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರಿ ಅಂತಾ ಹೇಳಿದ್ದರಿಂದ ಘಟನೆಯಲ್ಲಿ ತುಂಡಾಗಿದ್ದ ನನ್ನ ಬೆರಳನ್ನು ಚನ್ನಪಟ್ಟಣದ ಆಸ್ಪತ್ರೆಯಲ್ಲಿ

ದ್ರಾವಣದಲ್ಲಿ ಹಾಕಿಕೊಟ್ಟಿದ್ದು ಅದನ್ನು ವಿಕ್ಟೋರಿಯಾ ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ ಅಲ್ಲಿ ಸದರಿ ಬೆರಳನ್ನು ನನ್ನ ಕೈಗೆ ಜೋಡಿಸಿ ಹೊಲೆದಿರುತ್ತಾರೆ ಅಂತಾ ಸಾಕ್ಷಿ ನುಡಿದಿರುತ್ತಾರೆ.

20. ಈ ಘಟನೆ ಆಗಲು ಕಾರಣ ಏನು ಎಂಬುದರ ಬಗ್ಗೆ: ಸದರಿ ಘಟನೆ ಹಿಂದಿನ ದಿನ ಆರೋಪಿ ಮತ್ತು ಇತರರು ಗಾಂಜಾ ಹೊಡೆಯುತ್ತಿದ್ದಾಗ ನಾನು ಅವರಿಗೆ ಗಾಂಜಾ ಸೇವಿಸಬೇಡಿ ಇಲ್ಲಿಂದ ಹೋಗಿ ಎಂದು ಹೇಳಿದಾಗ, ಆರೋಪಿಯನ್ನು ಹೊರತುಪಡಿಸಿ ಇತರರು ಅಲ್ಲಿಂದ ಹೊರಟು ಹೋಗಿದ್ದರು. ಈ ವಿಚಾರದಲ್ಲಿ ನನ್ನ ಮತ್ತು ಆರೋಪಿಯ ನಡುವೆ ಆಗ ಗಲಾಟೆ ಆಯಿತು. ಅದೇ ಕಾರಣದಿಂದ ಆರೋಪಿ ಮರುದಿನ ನನ್ನ ಬೆರಳಿಗೆ ಚಾಕುವಿನಿಂದ ಹೊಡೆದಿರುತ್ತಾನೆ ಅಂತಾ ಸಾಕ್ಷಿ ನುಡಿದಿರುತ್ತಾರೆ. ಈ ಅಂಶವನ್ನು ಪರಿಶೀಲಿಸಲಾಗಿ, ಗಾಂಜಾ ಸೇವಿಸುತ್ತಿದುದ್ದನ್ನು ನೋಡಿ ಗಾಂಜಾ ಸೇವಿಸಬೇಡಿ ಅಂತಾ ಹೇಳಿದ್ದು, ಈ ಒಂದು ಬುದ್ಧಿವಾದವನ್ನು ಹೇಳಿದ್ದು, ಅದೇ ಒಂದು ಉದ್ದೇಶ ಇಟ್ಟುಕೊಂಡು, ಆ ಒಂದು ದ್ವೇಷದಿಂದ ಸದರಿಯವರು ಬರುವುದನ್ನು ನೋಡಿ ಬೈಕನ್ನು ಅಡ್ಡಗಟ್ಟಿ ನಿಲ್ಲಿಸಿ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದು ತನ್ನ ಬಳಿಯಿರುವ ಎಂ.ಒ.3 ಡ್ರಾಗರ್‌ನಿಂದ ಸದರಿ ಸಾಕ್ಷಿಯ ಎಡಗೈ ಹೆಬ್ಬೆರಳಿಗೆ ಹೊಡೆದು ತುಂಡು ಮಾಡಿದ್ದನ್ನು ಪರಿಶೀಲಿಸಲಾಗಿ, ಆರೋಪಿ ಅಪರಾಧ ಮಾಡಿರುತ್ತಾನೆ ಅಂತಾ ಸದರಿ ಸಾಕ್ಷಿಯಿಂದ ಸ್ಪಷ್ಟವಾಗಿ ಕಂಡು ಬಂದಿರುತ್ತದೆ. ಈ ಸಾಕ್ಷಿಯನ್ನು ಆರೋಪಿ ಪರ ವಕೀಲರು ವಿವರವಾಗಿ ಪಾಟೀ ಸವಾಲು ಮಾಡಿದರೂ ಸಹಿತ ಆರೋಪಿ ಆ ದಿವಸ ಆ ಸ್ಥಳಕ್ಕೆ ಬಂದಿಲ್ಲ, ಎಂ.ಒ.3 ನ್ನು ಬಳಸಿಲ್ಲ, ಬೈಕನ್ನು ತಡೆಗಟ್ಟಿಲ್ಲ, ಹೊಡೆದಿಲ್ಲ, ಬೆರಳು ತುಂಡಾಗಿಲ್ಲ

ಅಂತಾ ಎಲ್ಲೂ ಸಹಿತ ಪಾಟೀ ಸವಾಲಿಂದ ಹೊರ ಬಂದಿರುವುದಿಲ್ಲ. ಈ ಸಾಕ್ಷಿ ಗಾಯಾಳು ಸಾಕ್ಷಿ, ಪ್ರತ್ಯಕ್ಷ ಸಾಕ್ಷಿಯಾಗಿರುವುದರಿಂದ ಈ ಸಾಕ್ಷಿ ಹೇಳಿದಂಥ ಸಾಕ್ಷ್ಯ ನ್ಯಾಯಾಲಯವು ನಂಬತಕ್ಕಂಥಹ ಸಾಕ್ಷಿಯಾಗಿರುವುದರಿಂದ, ಎಲ್ಲಾ ಸಾಕ್ಷಿಗಳಿಗಿಂತ ಗಾಯಾಳು ಸಾಕ್ಷಿಯ ಹೇಳಿಕೆಗೆ ಬಹಳ ಮಹತ್ವ ತೂಕವಿರುತ್ತದೆ. ಇದೇ ಒಂದು ಸಾಕ್ಷ್ಯದ ಆಧಾರದಿಂದ ಶಿಕ್ಷೆ ನೀಡಬಹುದು ಅಂತಾ ಮಾನ್ಯ ಸರ್ವೋಚ್ಛ ನ್ಯಾಯಾಲಯ ***2015(1) Crimes 239 SC (DILIPKUMAR MANDOLA AND ANOTHER VS. STATE OF WEST BENGAL)*** ತೀರ್ಪಿನಲ್ಲಿ ತಿಳಿಸಲಾಗಿರುತ್ತದೆ. ಸದರಿ ತೀರ್ಪಿನ ಪ್ರಕಾರ ಈ ಸಾಕ್ಷಿ ಪ್ರತ್ಯಕ್ಷ ಮತ್ತು ಗಾಯಾಳು ಸಾಕ್ಷಿಯಾಗಿದ್ದು, ಆರೋಪಿಯನ್ನು ನೋಡಿದ್ದು, ಆರೋಪಿ ಬ್ಯಾಗ್‌ನಿಂದ ಎಂ.ಓ.3 - ಡ್ರಾಗರನ್ನು ತೆಗೆದುಕೊಂಡಿದ್ದು, ಅದರಿಂದ ಹೊಡೆಯಲು ಹೋದಾಗ ಎಡಗೈಯನ್ನು ಮುಂದೆ ತಂದಾಗ ಹೊಡೆದಿರುವುದರಿಂದ ಆರೋಪಿ ಅಪರಾಧ ಮಾಡಿರುತ್ತಾರೆ ಎಂಬುದರ ಬಗ್ಗೆ ಸ್ಪಷ್ಟವಾಗಿ ರುಜುವಾತುಪಡಿಸುತ್ತಾರೆ.

21. ವೈದ್ಯಕೀಯ ಸಾಕ್ಷ್ಯದ ಬಗ್ಗೆ: ಪ್ರಾಸಾ.2 ಇವರು ನುಡಿದಂಥ ಸಾಕ್ಷಿಗೆ ಪೂರಕವಾಗಿ ಪ್ರಾಸಾ.13 – ಡಾ.ಕೆ.ಟಿ.ರಮೇಶ, ವಿಕ್ಟೋರಿಯಾ ಆಸ್ಪತ್ರೆ ವೈದ್ಯಾಧಿಕಾರಿಯವರು ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 21-01-2020 ರಂದು ಫರಾನ್ ಮೆಹದಿ ಇವರು ನಮ್ಮ ಆಸ್ಪತ್ರೆಯಲ್ಲಿ ಹಲ್ಲೆಯಿಂದ ಆದಂತಹ ಗಾಯ ಹಾಗೂ ಹರಿತವಾದ ವಸ್ತುವನ್ನು ಒಬ್ಬ ವ್ಯಕ್ತಿ ನನಗೆ ಹೊಡೆದಿದ್ದರಿಂದ ಆಸ್ಪತ್ರೆಗೆ ದಾಖಲಾಗಿದ್ದು, ಸದರಿ ಗಾಯದಿಂದ ಎಡಗೈ ಹೆಬ್ಬೆರಳು ತುಂಡಾಗಿದ್ದು, ಇದಕ್ಕೆ ಸಂಬಂಧಪಟ್ಟಂತೆ ಪುನಃ ಜೋಡಣೆ ಮಾಡಿ ಶಸ್ತ್ರ ಚಿಕಿತ್ಸೆ

ಮಾಡಲಾಗಿದೆ ಅಂತಾ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ಪೂರಕವಾಗಿ ಪ್ರಾಸಾ.14 – ಡಾ.ರಮೇಶ್.ಆರ್., ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಾಧಿಕಾರಿಗಳಾಗಿದ್ದು ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 21-01-2020 ರಂದು ಬೆಳಗಿನ ಜಾವ 2.30 ಗಂಟೆಗೆ ಗಾಯಾಳು - ಫರಾನ್ ಮೆಹದಿ ಇವರು ಅವರ ಸಂಬಂಧಿಕರು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ಅವರಿಗೆ ಶಬೀರ್ ಎಂಬುವವರು ಹಲ್ಲೆ ಮಾಡಿದ ಗಾಯಾಗಿದ್ದು ಸದರಿ ಘಟನೆ ಬೆಳಿಗ್ಗೆ 11.30 ಗಂಟೆಯಾಗಿದ್ದು, 3 ತಾಸಿನೊಳಗೆ ಸದರಿ ಗಾಯಾಳುವಿಗೆ ಪರೀಕ್ಷೆ ಮಾಡಿ ಚಿಕಿತ್ಸೆ ಕೊಡಲಾಗಿರುತ್ತದೆ. ಸದರಿ ಗಾಯಾಳುವಿಗೆ ಆದಂಥ ಗಾಯ ತೀವ್ರ ಸ್ವರೂಪದ ಗಾಯವಾಗಿದ್ದು, ಸದರಿ ತುಂಡಾದ ಬೆರಳನ್ನು ಜೋಡಣೆ ಮಾಡಿ ಪ್ಲಾಸ್ಟಿಕ್ ಸರ್ಜರಿ ಮಾಡಲಾಗಿರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ನಿಶಾನೆ ಪಿ.7 - ಪ್ರಮಾಣಪತ್ರ ನೀಡಿದ್ದು, ನಂತರ ಎಂ.ಒ.3 ಡ್ರಾಗರನಿಂದ ಹಲ್ಲೆ ಮಾಡಿದರೆ ಈ ರೀತಿ ಗಾಯ ಆಗುವ ಸಾಧ್ಯತೆ ಇದೆ ಅಂತಾ ಸಾಕ್ಷಿ ಉತ್ತರಿಸಿರುತ್ತಾರೆ. ಸದರಿ ಸಾಕ್ಷಿಯನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಎಂ.ಒ.3 - ಇದು ಹರಿತವಾದ ಆಯುಧ ಅಲ್ಲ ಅನ್ನುವುದು ಸರಿಯಲ್ಲ. ಸದರಿ ಎಂ.ಒ.3 - ಇದು ಹಗುರವಾದ ವಸ್ತು ಇರುತ್ತದೆ ಅನ್ನುವುದು ಸರಿಯಲ್ಲ. ಸದರಿ ಎಂ.ಒ.3 ನ್ನು ಬಳಸಿದರೆ ಬೆರಳು ತುಂಡಾಗುವ ಸಾಧ್ಯತೆ ಇಲ್ಲ ಅಂದರೆ ಸರಿಯಲ್ಲ ಅಂತಾ ಸಾಕ್ಷಿ ನುಡಿದಿದ್ದರಿಂದ ಈ ವೈದ್ಯಕೀಯ ಸಾಕ್ಷ್ಯದ ಪ್ರಕಾರವೂ ಸಹಿತ ಪ್ರಾಸಾ.2 - ಗಾಯಾಳುಗಳ ಪೂರಕವಾಗಿ ಸಾಕ್ಷಿ ನುಡಿದಿರುವುದರಿಂದ, ವೈದ್ಯಕೀಯ ಸಾಕ್ಷಿಗಳ ಮುಖಾಂತರವೂ ಸಹಿತ ಪ್ರಾಸಾ.2 ರವರಿಗೆ ಆರೋಪಿ ಎಂ.ಒ.3 ನ್ನು ಬಳಸಿ ಬೆರಳಿಗೆ ಹೊಡೆದು ಬೆರಳು ತುಂಡು ಮಾಡಿ ತೀವ್ರ ಸ್ವರೂಪದ ಗಾಯವನ್ನುಂಟು ಮಾಡಿರುತ್ತಾರೆ

ಅಂತಾ ಸದರಿ ವೈದ್ಯಕೀಯ ಸಾಕ್ಷಿಯ ಮುಖಾಂತರ ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ರುಜುವಾತುಪಡಿಸಿರುತ್ತದೆ.

22. ಸದರಿ ಸಾಕ್ಷಿಗೆ ಪೂರಕವಾಗಿ <u>ಪ್ರಾಸಾ.10 – ಜೋಸೆಫ್</u>, ಚನ್ನಪಟ್ಟಣ ಪಿ.ಎಸ್.ಐ ಇವರು ಪ್ರಾಸಾ.2 ಇವರು ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾಗ ಆಸ್ಪತ್ರೆಗೆ ಹೋಗಿ ಸದರಿ ಗಾಯಾಳು - ಫರಾನ್ ಮೆಹದಿ ಇವರು ಕೊಟ್ಟಂಥ ನಿಶಾನೆ ಪಿ.5 ಹೇಳಿಕೆಯನ್ನು ಪಡೆದುಕೊಂಡು ಪಿ.ಎಸ್.ಐ. ಇವರಿಗೆ ಕೊಟ್ಟಿದ್ದರ ಬಗ್ಗೆ ಸಾಕ್ಷಿ ನುಡಿದಿರುತ್ತಾರೆ. ನಿಶಾನೆ ಪಿ.5 ರಲ್ಲಿ ಇರತಕ್ಕಂಥಹ ಹೇಳಿಕೆಗೆ ಅನುಗುಣವಾಗಿ ಪ್ರಾಸಾ.2 ಇವರು ಸಾಕ್ಷಿ ನುಡಿದಿರುವುದರಿಂದ, ಈ ಸಾಕ್ಷಿಯ ಪ್ರಕಾರ ಆರೋಪಿ ಎಂ.ಒ.3 ನ್ನು ಬಳಸಿ ಹಲ್ಲೆ ಮಾಡಿರುತ್ತಾರೆ ಅಂತಾ ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ರುಜುವಾತುಪಡಿಸಿರುತ್ತದೆ.

23. ಆರೋಪಿ ಪರ ವಕೀಲರು ವಾದ ಮಾಡುತ್ತಾ, ಮಣ್ಣು ತೆಗೆದುಕೊಂಡಿದ್ದೇವೆ ಅಂತಾ ಹೇಳಿದ್ದು ಅದು ಟಾರ್ ರಸ್ತೆಯಲ್ಲಿರತಕ್ಕಂಥ ವಸ್ತುವಾಗಿರುತ್ತದೆ, ಮಣ್ಣಾಗಿರುವುದಿಲ್ಲ. ಘಟನಾ ಸ್ಥಳದಲ್ಲಿ ಸಾಕ್ಷಿಗಳು ಸಮರ್ಪಕವಾಗಿ ಸ್ಥಳವನ್ನು ಹೇಳಿರುವುದಿಲ್ಲ, ಎಫ್.ಎಸ್.ಎಲ್ ವರದಿಯಲ್ಲಿ ಎಂ.ಒ.3 ರಲ್ಲಿ ರಕ್ತದಕಲೆಯ ಬಗ್ಗೆ, ರಕ್ತದ ಗುಂಪಿನ ಬಗ್ಗೆ ತಿಳಿಸಿರುವುದಿಲ್ಲ. ವೈದ್ಯಕೀಯ ಸಾಕ್ಷಿಗಳು ಬೇರೆ ಯಾವುದೋ ವ್ಯಕ್ತಿ ಅಂತಾ ಸಾಕ್ಷಿ ನುಡಿದಿರುವುದರಿಂದ ಆರೋಪಿಯ ಹೆಸರು ಹೇಳಿರುವುದಿಲ್ಲ. ಪ್ರಾಸಾ.3 ಪ್ರತ್ಯಕ್ಷ ಸಾಕ್ಷಿ, ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ. ಚನ್ನಪಟ್ಟಣ ವೈದ್ಯರ ಕಡೆಯಿಂದ

ದಾಖಲೆ ಪಡೆದುಕೊಂಡಿರುವುದಿಲ್ಲ. ತಡವಾಗಿ ದೂರು ಕೊಟ್ಟಿರುತ್ತಾರೆ. ಪ್ರಾಸಾ.14 ಗಾಯಾಳುವನ್ನು ಚಿಕಿತ್ಸೆ ಮಾಡಿದಂತಹ ವೈದ್ಯರು ಆಗಿರುವುದಿಲ್ಲ. ರಕ್ತವಾದ ಬಟ್ಟೆಯನ್ನು ಹಾಜರುಪಡಿಸಿರುವುದಿಲ್ಲ ಅಂತಾ ವಾದ ಮಾಡಿದ್ದನ್ನು ಪರಿಶೀಲಿಸಲಾಗಿ, ತಡವಾಗಿ ದೂರು ಕೊಟ್ಟಿದ್ದರ ಬಗ್ಗೆ ಪ್ರಾಸಾ.2 ರವರಿಗೆ ಎಡಗೈ ಹೆಬ್ಬೆರಳು ತುಂಡಾಗಿರುವುದರಿಂದ, ಆ ತುಂಡಾದ ಬೆರಳನ್ನು ಹೆಬ್ಬೆರಳಿಗೆ ಜೋಡಣೆ ಮಾಡಬೇಕಾಗಿರುವುದರಿಂದ, ಇಲ್ಲಿ ದೂರು ಕೊಡುವುದಕ್ಕಿಂತ ಪೂರ್ವದಲ್ಲಿ ಜೀವದ ಪ್ರಶ್ನೆ ಮುಖ್ಯವಾಗಿರುತ್ತದೆ. ಎಷ್ಟು ಬೇಗವಾಗಿ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ನೀಡಿದಾಗ ಬೆರಳನ್ನು ಜೋಡಿಸುವ ಸಾಧ್ಯತೆ ಇರುತ್ತದೆ. ಸದರಿ ಘಟನೆ ಮಧ್ಯರಾತ್ರಿ ಆಗಿರುವುದರಿಂದ, ಆ ಸಮಯದಲ್ಲಿ ಸಾರ್ವಜನಿಕರೂ ಸಹಿತ ಯಾರೂ ಸಿಗದೇ ಇರುವುದರಿಂದ ಇಂಥ ಸಂದರ್ಭದಲ್ಲಿ ಸ್ವಲ್ಪ ತಾಸು ತಡವಾಗಿ ದೂರು ಕೊಟ್ಟಿರುತ್ತಾರೆಯೇ ವಿನಃ ಇದೇ ಒಂದು ಕಾರಣದಿಂದ ಘಟನೆ ನಡೆದಿರುವುದಿಲ್ಲ ಅಂತಾ ನ್ಯಾಯಾಲಯವು ಪರಿಗಣಿಸಲು ಬರಲಾರದು. ಸಾಕ್ಷಿಗಳು ನುಡಿಯುವಾಗ ಘಟನೆಯಾಗಿ ಎಷ್ಟೋ ವರ್ಷದ ನಂತರ ವಿಚಾರಣೆ ಮಾಡಿದಾಗ ಎಲ್ಲಾ ವಿಷಯಗಳನ್ನು ನೆನಪಿಟ್ಟುಕೊಂಡು ಹೇಳುವ ಸಾಧ್ಯತೆ ಇರುವುದಿಲ್ಲ ಮತ್ತು ಕಾನೂನಿನ ಅರಿವು ಸಹಿತ ಇರುವುದಿಲ್ಲ. ಎಲ್ಲರೂ ಸಹಿತ ತಮ್ಮ ತಮ್ಮ ಕೆಲಸದ ಮೇಲೆ ಅವಲಂಬಿತವಾಗಿರುವಾಗ ಸದರಿ ಕೇಸಿಗೆ ಸಂಬಂಧಪಟ್ಟಂತೆ ನ್ಯಾಯಾಲಯದಿಂದ ಸಮನ್ಸ್ ಬಂದಾಗ ಮಾತ್ರ ಮತ್ತೆ ಗಮನ ಹರಿಸುತ್ತಾರೆಯೇ ವಿನಃ ಇನ್ನಿತರ ಸಮಯದಲ್ಲಿ ಸದರಿ ವಿಚಾರದ ಬಗ್ಗೆ ಗಮನ ಹರಿಸಿರುವುದಿಲ್ಲ. ಇಂಥ ಸಂದರ್ಭದಲ್ಲಿ ಸಣ್ಣ-ಪುಟ್ಟ ವ್ಯತ್ಯಾಸಗಳ ಆಧಾರ ಮೇಲಿಂದ ಘಟನೆ ಆಗಿರುವುದಿಲ್ಲ, ಆರೋಪಿ ಅಪರಾಧ

ಮಾಡಿರುವುದಿಲ್ಲ ಅಂತಾ, ಅದೇ ಒಂದು ಕಾರಣದಿಂದ ಆರೋಪಿಯನ್ನು ಬಿಡುಗಡೆ ಮಾಡಲು ಬರಲಾರದು ಅಂತ ಮಾನ್ಯ ಸರ್ವೋಚ್ಚ ನ್ಯಾಯಾಲಯ ***2013 Crl.L.J.4618 SC GANGA BHAVANI VS. RAYAPTHI VENKATAREDDI*** ತೀರ್ಪಿನಲ್ಲಿ ತಿಳಿಸಿರುತ್ತಾರೆ. ಸದರಿ ತೀರ್ಪಿನ ಪ್ರಕಾರ ಆರೋಪಿ ಪರ ವಕೀಲರು ಮಾಡಿದಂಥ ವಾದ, ಸಣ್ಣ-ಪುಟ್ಟ ವ್ಯತ್ಯಾಸಗಳ ಸಂಬಂಧಪಟ್ಟಂತೆ ಮಾತ್ರ ಇರುತ್ತದೆಯೋ ವಿನಃ ಈ ಒಂದು ಆಧಾರದ ಮೇಲಿಂದ ಆರೋಪಿ ಅಪರಾಧ ಮಾಡಿರುವುದಿಲ್ಲ ಅಂತಾ ನ್ಯಾಯಾಲಯವೂ ಪರಿಗಣಿಸಲು ಬರಲಾರದು.

24. ಪ್ರಾಸಾ.13 ಮತ್ತು 14 - ವೈದ್ಯರು, ಪ್ರಾಸಾ.2 ಇವರಿಗೆ ಶಸ್ತ್ರ ಚಿಕಿತ್ಸೆ ಮಾಡಿದ್ದು ಅದರಲ್ಲಿ ಆರೋಪಿಯ ಹೆಸರು ನಮೂದಿಸಿರುವುದಿಲ್ಲ, ಘಟನಾ ಸ್ಥಳ ನಮೂದಿಸಿರುವುದಿಲ್ಲ ಅಂತಾ ಮಾಡಿದ ವಾದವನ್ನು ಪರಿಶೀಲಿಸಲಾಗಿ ಹಾಗೂ ಪ್ರಾಸಾ.5 ಗಾಯಾಳು ಹೇಳಿಕೆ ಪಡೆಯುವಾಗ ಡಾಕ್ಟರ್ ರಮೇಶ್ ಕೆ.ಟಿ ಅಂತಾ ಬರೆದಿದ್ದು, ಸದರಿ ವೈದ್ಯರು ನನ್ನ ಸಮಕ್ಷಮ ನಿಶಾನೆ ಪಿ.5 ಹೇಳಿಕೆ ಪಡೆದುಕೊಂಡಿಲ್ಲ ಅಂತಾ ಹೇಳಿದ್ದು, ಆದರೆ ಪ್ರಾಸಾ.10 ಇವರು ಪೊಲೀಸ್ ಅಧಿಕಾರಿಯಾಗಿದ್ದು ನಿಶಾನೆ ಪಿ.5 ನ್ನು ಆಸ್ಪತ್ರೆಯಲ್ಲಿ ವೈದ್ಯರ ಮುಂದೆ ಪಡೆದುಕೊಂಡು ಹಾಜರುಪಡಿಸಿರುತ್ತಾರೆ. ಇಂಥ ಸಂದರ್ಭದಲ್ಲಿ ವೈದ್ಯರು ನುಡಿದಂತಹ ಸಾಕ್ಷಿಗಳಲ್ಲಿ ವ್ಯತ್ಯಾಸವಾಗಿದ್ದರೂ ಸಹಿತ ನ್ಯಾಯಾಲಯವು ವೈದ್ಯಕೀಯ ಸಾಕ್ಷ್ಯ ಮತ್ತು ಗಾಯಾಳು, ಪ್ರತ್ಯಕ್ಷ ಸಾಕ್ಷ್ಯವನ್ನು ಪರಿಗಣಿಸಿದಾಗ ಮಾನ್ಯ ನ್ಯಾಯಾಲಯವು ವೈದ್ಯಕೀಯ ಸಾಕ್ಷಿಗಿಂತ ಗಾಯಾಳು ಸಾಕ್ಷಿಯೇ ಅಥವಾ ಪ್ರತ್ಯಕ್ಷ ಸಾಕ್ಷಿಯೇ ಮೇಲೂ ಇರುತ್ತದೆ ಅಂತಾ ಪರಿಗಣಿಸತಕ್ಕದ್ದು ಅಂತಾ ಮಾನ್ಯ

ಸರ್ವೋಚ್ಛ ನ್ಯಾಯಾಲಯ ***<u>2015(3) CR 336 SC (EDWARD PERIYAN GAYASUMY AND INSPECTOR OF POLICE)</u>*** ತೀರ್ಪಿನಲ್ಲಿ ತಿಳಿಸಿರುತ್ತಾರೆ. ಸದರಿ ತೀರ್ಪಿನ ಪ್ರಕಾರವೂ ಸಹಿತ ಪ್ರಾಸಾ.2 ಗಾಯಾಳು, ಪ್ರಾಸಾ.1 - ಪ್ರತ್ಯಕ್ಷ ಸಾಕ್ಷಿ ನುಡಿದಿರುತ್ತಾರೆ. ಪ್ರಾಸಾ.3 - ಪ್ರತ್ಯಕ್ಷ ಸಾಕ್ಷಿಯಾಗಿದ್ದರೂ ಸಹಿತ ಪ್ರತಿಕೂಲ ಸಾಕ್ಷಿ ನುಡಿದರೂ ಸಹಿತ ಪ್ರಾಸಾ.1 ಮತ್ತು 2 ರವರ ಸಾಕ್ಷಿಯನ್ನು ತಿರಸ್ಕರಿಸಲು ಬರಲಾರದು. ಈ ಕಾರಣದಿಂದಲೂ ಸಹಿತ ಆರೋಪಿ ಪರ ವಕೀಲರು ಮಾಡಿದ ವಾದ ನ್ಯಾಯಸಮ್ಮತವಾಗಿರುವುದಿಲ್ಲ. ಪ್ರಾಸಾ 1 ಮತ್ತು 2 - ಪ್ರತ್ಯಕ್ಷ ಮತ್ತು ಗಾಯಾಳು ಸಾಕ್ಷಿ, ಪ್ರಾಸಾ.13 ಮತ್ತು 14 - ವೈದ್ಯಕೀಯ ಸಾಕ್ಷಿದಾರರ ಮುಖಾಂತರ ಆರೋಪಿ ಅಪರಾಧ ಮಾಡಿರುತ್ತಾರೆ ಅಂತಾ ರುಜುವಾತು ಆಗಿರುತ್ತದೆ.

25. <u>ಪ್ರಾಸಾ.**1** ಮತ್ತು ಪ್ರಾಸಾ.**2** ಮೊದಲು ಅಭಿಯೋಜಕ ಸಾಕ್ಷ್ಯದ ಪೂರಕವಾಗಿ ಸಾಕ್ಷಿ ನುಡಿದಿದ್ದು, ಪಾಟೀ ಸವಾಲು ಆಗಿದ್ದು, ನಂತರ ಸಾಕ್ಷಿಗಳನ್ನು ಪುನಃ ಪಾಟೀ ಸವಾಲು ಮಾಡಲು ಅರ್ಜಿ ಸಲ್ಲಿಸಿದಾಗ ಆಗ ಸದರಿ ಸಾಕ್ಷಿಗಳು ಪ್ರತಿಕೂಲ ಸಾಕ್ಷಿ ನುಡಿದಾಗ ಅಂಥ ಸಂದರ್ಭದಲ್ಲಿ ನ್ಯಾಯಾಲಯವು ಮೊದಲು ನುಡಿದಂಥ ಸಾಕ್ಷಿಯನ್ನು ಪರಿಗಣಿಸಬೇಕೋ, ನಂತರ ನುಡಿದಂಥ ಸಾಕ್ಷಿಯನ್ನು ಪರಿಗಣಿಸಬೇಕೋ ಎಂಬುದರ ಬಗ್ಗೆ:</u> ಆರೋಪಿ ಪರ ವಕೀಲರು ವಾದ ಮಾಡುತ್ತಾ, ಪ್ರಾಸಾ.1 ಮತ್ತು ಪ್ರಾಸಾ.2 ರವರು ದಿನಾಂಕ 13.02.2023 ರಂದು ಪುನಃ ಸಾಕ್ಷಿಯನ್ನು ಕರೆಸಿ ಪಾಟೀ ಸವಾಲು ಮಾಡಿದಾಗ ಸದರಿ ಸಾಕ್ಷಿಗಳು ಘಟನೆ ಆಗಿದ್ದರ ಬಗ್ಗೆ ಒಪ್ಪಿಕೊಂಡಿರುವುದಿಲ್ಲ. ಸದರಿ ಕೈಬೆರಳು ಮಿಷಿನ್‌ಗೆ ಸಿಕ್ಕಿ ಕಟ್ಟಾಗಿರುತ್ತದೆ ಅಂತಾ ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಆರೋಪಿ ಅಪರಾಧ

ಮಾಡಿರುವುದಿಲ್ಲ ಅಂತಾ ವಾದ ಮಾಡಿದ್ದನ್ನು ಪರಿಶೀಲಿಸಲಾಗಿ, ಪ್ರಾಸಾ.1 ದಿನಾಂಕ 06.09.2021 ರಂದು ಮುಖ್ಯ ವಿಚಾರಣಾ, ಪಾಟೀ ಸವಾಲು ಆಗಿದ್ದು, ಮುಖ್ಯ ವಿಚಾರಣೆಯಲ್ಲಿ ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿದ್ದು, ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದರೂ ಸಹಿತ ಮುಖ್ಯ ವಿಚಾರಣೆಯಲ್ಲಿರತಕ್ಕಂಥ ಯಾವುದೇ ಅಂಶಗಳು ಸುಳ್ಳು ಅಂತಾ ಕಂಡು ಬಂದಿರುವುದಿಲ್ಲ. ಘಟನೆ ಆಗಿದ್ದರ ಬಗ್ಗೆ ರುಜುವಾತು ಆಗಿರುತ್ತದೆ. ದಿನಾಂಕ 06.09.2021 ಆದ ನಂತರ 3 ತಿಂಗಳ ಮೇಲೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.311 ರ ಅಡಿಯಲ್ಲಿ ಅರ್ಜಿ ಸಲ್ಲಿಸಿ ಪುನಃ ಸಾಕ್ಷಿಯನ್ನು ರಿಕಾಲ್ ಮಾಡಿ ದಿನಾಂಕ 14.12.2021 ರಂದು ಪಾಟೀ ಸವಾಲು ಮಾಡಿದ್ದು ಆಗ ಆರೋಪಿ ಚಾಕುನಿಂದ ಪ್ರಾಸಾ.2 - ಫರಾನ್ ಮೆಹದಿಗೆ ಹೊಡೆದ ಎಂದು ನನ್ನ ದೂರಿನಲ್ಲಿ ಹೇಳಿಲ್ಲ ಎಂದರೆ ಸರಿ. ಡ್ರಾಗರ್‌ನಿಂದ ಹೊಡೆದ ಎಂದು ಹೇಳಿರುತ್ತೇನೆ, ವೆಲ್ಡಿಂಗ್ ಕೆಲಸ ಮಾಡುವಾಗ ಕಬ್ಬಿಣ ಕತ್ತರಿಸುತ್ತೇವೆ ಅಂದರೆ ಸರಿ ಅಂಥ ಸಾಕ್ಷಿ ಉತ್ತರಿಸುತ್ತಾರೆ. ಇದಾದ ಪುನಃ ಎರಡು ವರ್ಷದ ನಂತರ ಪುನಃ ಆರೋಪಿ ಪರ ವಕೀಲರು ದಂಡ ಪ್ರಕ್ರಿಯಾ ಸಂಹಿತೆ ಕಲಂ.311 ರ ಅಡಿಯಲ್ಲಿ ಅರ್ಜಿ ಸಲ್ಲಿಸಿ ಪುನಃ ಮುಂದುವರೆದ ಪಾಟೀ ಸವಾಲು ಮಾಡಿದಾಗ ದೂರಿನಲ್ಲಿರುವ, ಮಹಜರಿನಲ್ಲಿರುವ, ಈ ಮೊದಲು ಮುಖ್ಯ ವಿಚಾರಣೆಯಲ್ಲಿ ನುಡಿದಂಥ ಸಾಕ್ಷಿ ಸಂಪೂರ್ಣ ಸುಳ್ಳು ಇರುತ್ತದೆ, ಆರೋಪಿ ಯಾವುದೇ ರೀತಿ ಹಲ್ಲೆ ಮಾಡಿಲ್ಲ, ಘಟನೆ ಬಗ್ಗೆ ಗೊತ್ತಿಲ್ಲ, ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿಲ್ಲ. ಆರೋಪಿ ಎಂ.ಒ.3 ನ್ನು ಬಳಸಿ ಪ್ರಾಸಾ.2 ಇವರಿಗೆ ಹಲ್ಲೆ ಮಾಡಿರುವುದಿಲ್ಲ ಅಂತಾ ಸಂಪೂರ್ಣ ಆರೋಪಿ ಪರವಾಗಿ ಸಾಕ್ಷಿ ನುಡಿದಿದ್ದು, ನಂತರ ಪುನಃ ಸರ್ಕಾರಿ ಅಭಿಯೋಜಕರು

ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಿದ್ದು ಈ ಆರೋಪಿಯ ವಿರುದ್ಧ ಮೊದಲು ಸಾಕ್ಷಿ ನುಡಿದು ಈಗ ಸಾಕ್ಷಿ ನುಡಿದಿರುವುದಿಲ್ಲ ಅಂತಾ ಪ್ರಶ್ನೆ ಕೇಳಿರುತ್ತಾರೆ. ಅದೇ ಪ್ರಕಾರ ಪ್ರಾಸಾ.2 - ಗಾಯಾಳು ದಿನಾಂಕ 06.09.2021 ರಂದು ಅಭಿಯೋಜಕ ಪೂರಕವಾಗಿ ಸಾಕ್ಷ್ಯ ನುಡಿದಿದ್ದು, ಪಾಟೀ ಸವಾಲೂ ಸಹಿತ ಮುಗಿದಿದ್ದು, <u>ಇದಾದ 2 ವರ್ಷದ ನಂತರ</u> ಪುನಃ ಅರ್ಜಿ ಸಲ್ಲಿಸಿ ದಿನಾಂಕ 13-12-2023 ರಂದು ಪಾಟೀ ಸವಾಲು ಮಾಡಿದಾಗ ಮಧ್ಯರಾತ್ರಿ ನಿರಂತರವಾಗಿ ಕೆಲಸ ಮಾಡುತ್ತಿರುವಾಗ ನಿದ್ದೆ ಹೊತ್ತಿನಲ್ಲಿ ಆಕಸ್ಮಿಕವಾಗಿ ಕೈಬೆರಳು ಕತ್ತರಿಸುವುದು, ಗಾಯ ಆಗುವುದು ಆಗುತ್ತದೆ ಅಂದರೆ ಸರಿ. ನಾನು ವೆಲ್ಡಿಂಗ್ ಕೆಲಸ ಮಾಡುತ್ತೇನೆ ಅಂದರೆ ಸರಿ. ಚನ್ನಪಟ್ಟಣ ಆಸ್ಪತ್ರೆಗೆ ಹೋದಾಗ ವೈದ್ಯರು ಹೇಗಾಯಿತು ಅಂತಾ ಕೇಳಿದಾಗ ಮಿಷಿನ್‌ನಲ್ಲಿ ಕೆಲಸ ಮಾಡುವಾಗ ಎಡಗೈ ಹೆಬ್ಬೆರಳು ಕಟ್ಟಾಯಿತು ಎಂದು ಹೇಳಿದ್ದೇನೆ ಅಂದರೆ ಸರಿ ಅಂತಾ ಆರೋಪಿಯ ಪರವಾಗಿ ಸಾಕ್ಷಿ ನುಡಿದಿರುತ್ತಾರೆ. ನಾನು ಮುಖ್ಯ ವಿಚಾರಣೆ ಸಾಕ್ಷಿ ನುಡಿಯಲು ಬಂದಾಗ ನನ್ನ ಅಣ್ಣ ಕೂಡ ಬಂದಿದ್ದರು ಅಂತಾ ಒಪ್ಪಿಕೊಂಡುತ್ತಾರೆ. ನಂತರ ಪುನಃ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಿರುತ್ತಾರೆ. ಈ ಅಂಶವನ್ನು ಪರಿಶೀಲಿಸಲಾಗಿ, ಇಂಥ ಸಂದರ್ಭದಲ್ಲಿ ನ್ಯಾಯಾಲಯವು ಪ್ರಾಸಾ.1 ಮತ್ತು ಪ್ರಾಸಾ.2 ರವರು ಮೊದಲು ನುಡಿದಂಥ ಸಾಕ್ಷಿಯನ್ನು ಪರಿಗಣಿಸಬೇಕೋ ಅಥವಾ ನಂತರ 2 ವರ್ಷ ಆದ ನಂತರ ಪುನಃ ಸಾಕ್ಷಿಯನ್ನು ಕರೆಯಿಸಿ ಪಾಟೀ ಸವಾಲು ಮಾಡಿದಾಗ ಆರೋಪಿ ಪರವಾಗಿ ನುಡಿದಂಥ ಸಾಕ್ಷಿಯನ್ನು ಪರಿಗಣಿಸಬೇಕೋ ಎಂಬುದರ ಬಗ್ಗೆ ಮಾನ್ಯ ಸರ್ವೋಚ್ಛ ನ್ಯಾಯಾಲಯ ***<u>2007 Crl.L.J.2942 SC (Jodharaj Singh Vs. State of</u>***

***Rajasthan)*** ಈ ತೀರ್ಪನ್ನು ಪರಿಶೀಲಿಸಲಾಗಿ, ಆರೋಪಿಯ ವಿರುದ್ಧ ಭಾ.ದಂ.ಸಂಹಿತೆ ಕಲಂ.302 ರ ಅಡಿಯಲ್ಲಿ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು, ವಿಚಾರಣಾ ನ್ಯಾಯಾಲಯವು ಪ್ರಾಸಾ.8 ಮತ್ತು ಪ್ರಾಸಾ.9 - ಪ್ರತ್ಯಕ್ಷ ಸಾಕ್ಷಿಗಳು ಮೊದಲು ಅಭಿಯೋಜನಾ ಪರವಾಗಿ ಸಾಕ್ಷಿ ನುಡಿದು ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ.311 ರ ಅಡಿಯಲ್ಲಿ ಅರ್ಜಿ ಸಲಿಸ್ಲಿಸಿ ಪಾಟೀ ಸವಾಲು ಮಾಡಿದಾಗ ಅಭಿಯೋಜನೆ ವಿರದ್ಧವಾಗಿ ಸಾಕ್ಷಿ ನುಡಿದಿದ್ದು, ವಿಚಾರಣಾ ನ್ಯಾಯಾಲಯವು ಮೊದಲು ನುಡಿದಂಥ ಸಾಕ್ಷಿಯನ್ನು ಪರಿಗಣಿಸಿ ಆರೋಪಿಗೆ ಶಿಕ್ಷೆ ವಿಧಿಸಿದ್ದು, ನಂತರ ಸದರಿ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದಾಗ ಸದರಿ ಮೇಲ್ಮನವಿ ವಜಾ ಆಗಿದ್ದು, ನಂತರ ಸದರಿ ತೀರ್ಪಿನ ವಿರುದ್ಧ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದಾಗ, ಮೇಲ್ಮನವಿಯಲ್ಲಿ ಪ್ರಾಸಾ.8 ಮತ್ತು ಪ್ರಾಸಾ.9 ರವರು ಪ್ರತಿಕೂಲ ಸಾಕ್ಷಿ ನುಡಿದ ಬಗ್ಗೆ ವಾದ ಮಂಡಿಸಿದಾಗ ಇದಕ್ಕೆ ಮಾನ್ಯ ಸರ್ವೋಚ್ಛ ನ್ಯಾಯಾಲಯವು ತಮ್ಮ ತೀರ್ಪಿನ ಪ್ಯಾರಾ 11 ರಲ್ಲಿ ಮೇಲ್ಮನವಿದಾರರನ್ನು ಒಳಗೊಂಡ ಪ್ರಕರಣದಲ್ಲಿ ಏಕೈಕ ವಿಶಿಷ್ಟ ಸಂಗತಿ ಅಂದರೆ ಪ್ರಾಸಾ.8 ಮತ್ತು ಪ್ರಾಸಾ.9 ಈ ಸಾಕ್ಷಿಗಳು ಪ್ರತಿಕೂಲವಾಗಿ ತಿರುಗಿ ಬಿದ್ದರೂ ನಮ್ಮ ಅಭಿಪ್ರಾಯದಲ್ಲಿ ಇದು ಪ್ರಾಸಿಕ್ಯೂಷನ್ ಪ್ರಕರಣವನ್ನು ಗಣನೀಯವಾಗಿ ಬದಲಾಯಿಸುವುದಿಲ್ಲ, ಏಕೆಂದರೆ ಶಿಕ್ಷೆಯು ಒಬ್ಬ ಸಾಕ್ಷಿಯ ಸಾಕ್ಷ್ಯವನ್ನು ಆಧರಿಸಬಹುದು ಇದ್ದಲ್ಲದೇ ನ್ಯಾಯಾಲಯಗಳು ಪ್ರಾಸಿಕ್ಯೂಷನ್ ಅಡ್ಡ ಪರೀಕ್ಷೆಗೆ ಒಳಗಾಗಲು ಅನುಮತಿಸಿದ ಸಾಕ್ಷಿಯ ಸಾಕ್ಷ್ಯದ ಒಂದು ಭಾಗವನ್ನು ಅವಲಂಬಿಸುವ ಹಕ್ಕನ್ನು ಹೊಂದಿದೆ ಅಂತಾ ತಿಳಿಸಿದ್ದು, ಅದೇ ಪ್ರಕಾರ ಪ್ಯಾರಾ 14 ರಲ್ಲಿ ಸಾಕ್ಷಿ ಒಬ್ಬರು ಒಂದಲ್ಲಾ ಒಂದು

ಕಾರಣಕ್ಕಾಗಿ ತಮ್ಮ ಹಿಂದಿನ ಹೇಳಿಕೆಯಿಂದ ಸ್ವಲ್ಪ ಮಟ್ಟಿಗೆ ಹಿಂದೆ ಸರಿದಾದರೆ ಕಾರಣಕ್ಕಾಗಿ ಮಾತ್ರ ಪ್ರಾಸಿಕ್ಯೂಷನ್ ಪ್ರಕರಣವನ್ನು ಸಂಪೂರ್ಣವಾಗಿ ತಿರಸ್ಕರಿಸಲು ಸಾಕಾಗುವುದಿಲ್ಲ ಅಂಥ ಪರಿಸ್ಥಿತಿಯಲ್ಲೂ ಸಹ ನ್ಯಾಯಾಲಯವು ಶಕ್ತಿಹೀನವಾಗಿಲ್ಲ, ದಾಖಲೆಯಲ್ಲಿ ಲಭ್ಯವಿರುವ ಸಾಮಾಗ್ರಿಗಳನ್ನು ಗಮನದಲ್ಲಿಟ್ಟುಕೊಂಡು ಪ್ರತಿಕೂಲ ಎಂದು ಘೋಷಿಸಲಾದ ಸಾಕ್ಷಿಯ ಸಾಕ್ಷ್ಯದ ಒಂದು ಭಾಗವನ್ನು ಅವಲಂಬಿಸಲು ನ್ಯಾಯಾಲಯಕ್ಕೆ ಅನುಮತಿ ಅಂತಾ ತೀರ್ಪನ್ನು ಪರಿಗಣಿಸಿ ಪ್ರಾಸಾ.8 ಮತ್ತು ಪ್ರಾಸಾ.9 ರವರು ಮೊದಲು ನುಡಿದಂಥ ಸಾಕ್ಷಿಯನ್ನು ಪರಿಗಣಿಸಿ ವಿಚಾರಣಾ ನ್ಯಾಯಾಲಯ ಮತ್ತು ಉಚ್ಛ ನ್ಯಾಯಾಲಯ ನೀಡಿದ ತೀರ್ಪು ನ್ಯಾಯಸಮ್ಮತವಾಗಿದೆ ಅಂತಾ ಪರಿಗಣಿಸಿ ಮೇಲ್ಮನವಿಯನ್ನು ವಜಾ ಮಾಡಿದ್ದರ ಬಗ್ಗೆ ಇರುತ್ತದೆ. ಈ ತೀರ್ಪನ್ನು ಈ ಕೇಸಿಗೆ ಪರಿಶೀಲಿಸಲಾಗಿ, ಪ್ರಾಸಾ.1 ಮತ್ತು ಪ್ರಾಸಾ.2 ರವರು ದಿನಾಂಕ 16.09.2021 ರಂದು ಸಾಕ್ಷಿ ಪಾಟೀ ಸವಾಲು ಮಾಡಿದಾಗ ಅಭಿಯೋಜನಾ ಪೂರಕವಾಗಿ ಸಾಕ್ಷಿ ನುಡಿದಿದ್ದು, ನಂತರ 2 ವರ್ಷ ಆದ ಮೇಲೆ ಆರೋಪಿ ಪರ ವಕೀಲರು ದಂಡ ಪ್ರಕ್ರಿಯಾ ಸಂಹಿತೆ ಕಲಂ.311 ರ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ಅದನ್ನು ಪುರಸ್ಕರಿಸಿದ್ದು, ನಂತರ ಪಾಟೀ ಸವಾಲು ಮಾಡಿದಾಗ ಸಂಪೂರ್ಣ ಅಭಿಯೋಜನಾ ವಿರುದ್ಧವಾಗಿ ಸಾಕ್ಷಿ ನುಡಿದಿದ್ದು, ವಕೀಲರು ಕೇಳಿದ ಎಲ್ಲಾ ಪ್ರಶ್ನೆಗಳಿಗೆ ಅವರ ಪರವಾಗಿ ಉತ್ತರ ನೀಡಿದ್ದು, ಇಂಥ ಸಂದರ್ಭದಲ್ಲಿ ನ್ಯಾಯಾಲಯವು ಮೊದಲು ನುಡಿದಂತ ಸಾಕ್ಷಿಯನ್ನು ಪರಿಗಣಿಸಬೇಕಾಗುತ್ತದೆಯೋ ವಿನಃ ನಂತರ ನುಡಿದಂಥ ಸಾಕ್ಷಿಯನ್ನು ಒಂದು ಭಾಗ ಅಂತಾ

ಪರಿಗಣಿಸಬೇಕಾಗುತ್ತದೆ. ಆದ್ದರಿಂದ ಆರೋಪಿ ಅಪರಾಧ ಮಾಡಿರುವುದಿಲ್ಲ ಅಂತಾ ನ್ಯಾಯಾಲಯವು ಪರಿಗಣಿಸಲು ಬರಲಾರದು.

26. ಆರೋಪಿಯ ನಡತೆಯ ಬಗ್ಗೆಃ ಘಟನೆಯ ಬಗ್ಗೆ ಸದರಿ ಪ್ರಾಸಾ.1 ಮತ್ತು 2 ರವರು ಸಂಪೂರ್ಣ ಸಾಕ್ಷಿ ನುಡಿದಿದ್ದು, ಪಾಟೀ ಸವಾಲು ಮಾಡಿದ್ದು ಆರೋಪಿ ಎಂ.ಒ.3 ನ್ನು ಬಳಸಿ ಹಲ್ಲೆ ಮಾಡಿದ್ದರ ಬಗ್ಗೆ ಪ್ರತ್ಯಕ್ಷ, ಗಾಯಾಳು ಸಾಕ್ಷಿ ಮುಖಾಂತರ ರುಜುವಾತುಪಡಿಸಿದ್ದು, ಇದಕ್ಕೆ ಪೂರಕವಾಗಿ ವೈದ್ಯಕೀಯ ಸಾಕ್ಷಿಗಳಿದ್ದು, ತನಿಖಾಧಿಕಾರಿಗಳು, ಎಫ್ಎಸ್ಎಲ್ ವರದಿ ಹಾಗೂ ಸಾಂದರ್ಭಿಕ ಸಾಕ್ಷಿ, ಅಮಾನತ್ತು ಮಹಜರ್ ಸಾಕ್ಷಿಗಳು ಅಭಿಯೋಜಕ ಪೂರಕವಾಗಿ ಸಾಕ್ಷ್ಯ ನುಡಿದಿದ್ದು, 2 ವರ್ಷವಾದ ನಂತರ ಪುನಃ ಸಾಕ್ಷಿಯನ್ನು ಕರೆಸಿ ತಮ್ಮ ಪರವಾಗಿ ಸಾಕ್ಷಿ ನುಡಿದಿದ್ದನ್ನು ಪರಿಶೀಲಿಸಲಾಗಿ, ಇಂಥ ಸಂದರ್ಭದಲ್ಲಿ ನ್ಯಾಯಾಲಯವು ಆರೋಪಿ ಮತ್ತು ಸಾಕ್ಷಿದಾರರ ನಡತೆಯನ್ನು ಪರಿಗಣಿಸಬೇಕಾಗುತ್ತದೆ. ಅಭಿಯೋಜಕ ಪರವಾಗಿ ಸಾಕ್ಷಿ ನುಡಿದಿದ್ದು, ಶಿಕ್ಷೆ ಆಗುತ್ತದೆ ಎಂಬ ಕಾರಣದಿಂದ, ಅದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಪುನಃ ಪ್ರಾಸಾ.1 ಮತ್ತು 2 ರವರಿಗೆ ಆಮಿಷವೊಡ್ಡಿ ಅವರನ್ನು ಕರೆಸಿ ಸದರಿಯವರ ಕಡೆಯಿಂದ ಸುಳ್ಳನ್ನು ಹೇಳಿಸಿದ್ದನ್ನು ಪರಿಶೀಲಿಸಲಾಗಿ, ಇಂಥ ಸಂದರ್ಭದಲ್ಲಿ ಆರೋಪಿಯ ನಡತೆಯನ್ನೂ ಸಹಿತ ನ್ಯಾಯಾಲಯವು ಪರಿಗಣಿಸಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ಪ್ರಾಸಾ.1 ಮತ್ತು ಪ್ರಾಸಾ.2 ರವರು ಮೊದಲು ಅಭಿಯೋಜಕ ಪರವಾಗಿ ಸಾಕ್ಷಿ ನುಡಿದು, ನಂತರ ಸುಳ್ಳು ಸಾಕ್ಷಿ ನುಡಿದಿರುವುದರಿಂದ ಇಂಥವರ ಮೇಲೂ ಸಹಿತ ನ್ಯಾಯಾಲಯವು ಸ್ವತಃ ಕೇಸು ದಾಖಲು ಮಾಡಲು ಸೂಕ್ತ ಅಂತಾ ನ್ಯಾಯಾಲಯಕ್ಕೆ ಕಂಡು ಬಂದಿರುತ್ತದೆ. ಆದ್ದರಿಂದ ಇಂಥ

ಸಂದರ್ಭದಲ್ಲಿ ಪ್ರಾಸಾ.1 ಮತ್ತು ಪ್ರಾಸಾ.2 ರವರಿಗೆ ಆರೋಪಿ ಆಮಿಷವೊಡ್ಡಿ ಸದರಿಯವರನ್ನು ಮನವೊಲಿಸಿ ಸದರಿಯವರಿಗೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳಿದರೆ ಏನಾಗುತ್ತದೆ ಎಂಬುದರ ಬಗ್ಗೆ ಅರಿವು ಮೂಡಿಸದೇ ಆರೋಪಿ ತಾನು ಬಚಾವಾಗುವ ಸಲುವಾಗಿ ಪ್ರಾಸಾ.1 ಮತ್ತು 2 ಇವರ ಬಳಿ ಹೋಗಿ ನ್ಯಾಯಾಲಯದ ಹೊರಗಡೆ ಭರವಸೆ ನೀಡಿದ್ದರಿಂದ ಇಂಥ ಸಂದರ್ಭದಲ್ಲಿ ನ್ಯಾಯಾಲಯವು ಪ್ರಾಸಾ.1 ಮತ್ತು 2 ರವರ ಮೇಲೆ ಕಾನೂನು ಜರುಗಿಸುವಗಿಂತ ಪೂರ್ವದಲ್ಲಿ ಆರೋಪಿಯ ಮೇಲೆ ಕಠಿಣವಾದಂತಹ ಕ್ರಮ ಜರುಗಿಸುವುದು ಸೂಕ್ತ ಅಂತಾ ನ್ಯಾಯಾಲಯಕ್ಕೆ ಕಂಡು ಬಂದಿರುತ್ತದೆ. ಆದ್ದರಿಂದ ಆರೋಪಿ ಪರ ವಕೀಲರು ತದನಂತರ ಪಾಟೀ ಸವಾಲು ಮಾಡಿ ತಮ್ಮ ಪರವಾಗಿ ಸಾಕ್ಷಿ ನುಡಿದಂಥ ನಂತರದ ಸಾಕ್ಷಿಯನ್ನು ನ್ಯಾಯಾಲಯವು ಈ ಹಂತದಲ್ಲಿ ಪರಿಗಣಿಸಲು ಬರಲಾರದು.

27. <u>ಸಾಂದರ್ಭಿಕ ಸಾಕ್ಷಿಯ ಬಗ್ಗೆ:</u> ಪ್ರಾಸಾ.4 -ಮುಷಾಫಿರ್, ಗಾಯಾಳು - ಪ್ರಾಸಾ.2 ಇವರ ಸಹೋದರನಾಗಿದ್ದು, ಇವರು ದಿನಾಂಕ 21-01-2020 ರಂದು ರಾತ್ರಿ 11.30 ಗಂಟೆ ಸಮಯದಲ್ಲಿ ಮನೆಯಲ್ಲಿದ್ದಾಗ ಪ್ರಾಸಾ.3 ಇವರು ಫೋನ್ ಮಾಡಿ ಆರೋಪಿ, ಪ್ರಾಸಾ.2 ಫರಾನ್ ಮೆಹದಿ ಅವರ ಜೊತೆ ಜಗಳ ಮಾಡಿ ಹಲ್ಲೆ ಮಾಡಿದ್ದು, ಬೆರಳು ಕತ್ತರಿಸಲಾಗಿದೆ ಅಂತಾ ಹೇಳಿದ ತಕ್ಷಣ ಚನ್ನಪಟ್ಟಣ ಆಸ್ಪತ್ರೆಗೆ ಹೋಗಿ ನಂತರ ಬೆರಳು ಕಟ್ಟಾಗಿದ್ದನ್ನು ನೋಡಿ ವಿಕ್ಟೋರಿಯಾ ಆಸ್ಪತ್ರೆ ಕರೆದುಕೊಂಡು ಹೋಗಿ, ನಂತರ ಅಲ್ಲಿ ಚಿಕಿತ್ಸೆ ಕೊಡಿಸಿದ್ದರ ಬಗ್ಗೆ ಸಾಕ್ಷ್ಯ ನುಡಿದಿರುತ್ತಾರೆ. ಈ ಸಾಕ್ಷಿಯನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಮುಷಾದ್ದಿರ್ ನನ್ನ ಅಣ್ಣ. <u>ನನ್ನ ಅಣ್ಣ ಹಾಗೂ ಫರಾನ್</u>

ಗಾಂಜಾ ಸೇದುತ್ತಾರೆ ಅಂದರೆ ಸಾಕ್ಷಿ ಫರಾನ್ ಸೇದುವುದಿಲ್ಲ, ಆದರೆ ನನ್ನ ಅಣ್ಣ ಮುಷದ್ದಿರ್ ಗಾಂಜಾ ಸೇದುತ್ತಾನೆ. ಈ ವಿಚಾರವಾಗಿ ಆರೋಪಿ ನಮ್ಮ ಮನೆಯವರಿಗೆ ಹೇಳಿದ್ದರಿಂದ ನಮ್ಮ ಮನೆಯವರು ನನ್ನ ಅಣ್ಣನಿಗೆ ಬೈದಿದ್ದರು ಅಂದರೆ ಸರಿಯಲ್ಲ. ವೆಲ್ಡಿಂಗ್ ಕೆಲಸ ಮಾಡುವಾಗ ಆಕಸ್ಮಿಕವಾಗಿ ಯಂತ್ರಕ್ಕೆ ಬೆರಳು ಅಡ್ಡ ಬಂದಿದ್ದರಿಂದ ಫರಾದನ ಬೆರಳು ಕತ್ತರಿಸಿ ಹೋಗಿರುತ್ತದೆ ಅನ್ನುವುದು ಸರಿಯಲ್ಲ. ಘಟನೆಯ ದಿನ ಸುಹೇಲ್ ಯಾವ ನಂಬರ್‌ನಿಂದ ಫೋನ್ ಮಾಡಿದ್ದಾನೆ ಅಂತಾ ಹೇಳಲಾಗುವುದಿಲ್ಲ. ನಮ್ಮ ಮನೆಯಿಂದ ಚನ್ನಪಟ್ಟಣ್ಣ ಆಸ್ಪತ್ರೆ ಒಂದೂವರೆ ಕಿಲೋಮೀಟರ್ ದೂರದಲ್ಲಿದೆ. ಫೋನಿನಲ್ಲಿ ವಿಷಯ ತಿಳಿದ ತಕ್ಷಣ 12 ಗಂಟೆಗೆ ನಾನು ಆಸ್ಪತ್ರೆಗೆ ಹೋದೆನು. ಆ ದಿವಸ ಆಗಲೀ ಮಾರನೇ ದಿನವಾಗಲೀ ಪೊಲೀಸರಿಗೆ ದೂರು ಕೊಡಲು ನಾನು ಹೋಗಿಲ್ಲ. ಗಾಂಜಾ ಸೇವಿಸುವ ಬಗ್ಗೆ ಆರೋಪಿ ನಮ್ಮ ಮನೆಯವರಿಗೆ ಹೇಳಿದ್ದರಿಂದ ಆ ದ್ವೇಷದಿಂದ ನಾನು ಮತ್ತು ನನ್ನ ಸಹೋದರ ಸೇರಿ ಆರೋಪಿಯ ವಿರುದ್ಧ ಸುಳ್ಳು ಕೇಸು ದಾಖಲು ಮಾಡಿರುತ್ತೇವೆ ಅಂತಾ ಪಾಟೀ ಸವಾಲು ಮಾಡಿದ ಅಂಶವನ್ನು ಅಲ್ಲಗಳೆದಿರುತ್ತಾರೆ. ಈ ಸಾಕ್ಷ್ಯದ ಮುಖಾಂತರ ಆರೋಪಿಯ ಪ್ರತಿರಕ್ಷೆ ರುಜುವಾತುಪಡಿಸಲು ವಿಫಲವಾಗಿರುತ್ತಾರೆ.

28. ಆರೋಪಿಯನ್ನು ದಸ್ತಗಿರಿ ಮಾಡಿ ಹಾಜರುಪಡಿಸಿದಂತಹ ಸಾಕ್ಷಿಯ ಬಗ್ಗೆ:

ಪ್ರಾಸಾ.7 – ಅರೇಂದ್ರೇಗೌಡ, ಎಎಸ್ಐ, ಚನ್ನಪಟ್ಟಣ ಇವರು ಆರೋಪಿಯನ್ನು ದಸ್ತಗಿರಿ ಮಾಡಿ ಹಾಜರಪಡಿಸುವ ಬಗ್ಗೆ ಠಾಣಾಧಿಕಾರಿಯೂ ನೇಮಕ ಮಾಡಿದ್ದು, ಆ ಪ್ರಕಾರ ಕೆಂಗೇರಿಯ ಬಾಬಾ ಸಾಹೇಬ್ರು ಪಾಳ್ಯಕ್ಕೆ ಹೋಗಿ ವಿಚಾರಿಸಿ ಆರೋಪಿ ಇದ್ದಂಥ ಸ್ಥಳವನ್ನು ಪರಿಶೀಲಿಸಿ ಬೆಳಗ್ಗೆ 11.00 ಗಂಟೆಗೆ ಹೋಗಿ ಆರೋಪಿಯನ್ನು ವಶಕ್ಕೆ

ಪಡೆದುಕೊಂಡು ಮಧ್ಯಾಹ್ನ 12.30 ಗಂಟೆಗೆ ಪಿಎಸ್ಐ ಇವರ ಮುಂದೆ ಹಾಜರುಪಡಿಸಿದ್ದರ ಬಗ್ಗೆ ಸಾಕ್ಷಿ ನುಡಿದಿರುತ್ತಾರೆ. ಈ ಸಾಕ್ಷಿಯು ಪಿ.ಎಸ್.ಐರವರ ಮುಂದೆ ಹಾಜರುಪಡಿಸಿದ ನಂತರ ಪಿ.ಎಸ್.ಐರವರು ಆರೋಪಿಯನ್ನು ದಸ್ತಗಿರಿ ಮಾಡಿ ಆತನನ್ನು ವಿಚಾರ ಮಾಡಿ ನಿಶಾನೆ ಪಿ.10 - ಸ್ವಇಚ್ಛಾ ಹೇಳಿಕೆ ಕೊಟ್ಟಿರುತ್ತಾರೆ. ಸದರಿ ಆರೋಪಿ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ಘಟನೆಯ ಬಗ್ಗೆ ಒಪ್ಪಿಕೊಂಡಿದ್ದು, ಸದರಿ ಹೇಳಿಕೆಯಲ್ಲಿ ದಿನಾಂಕ 21.01.2020 ರಂದು ಬೆಳಿಗ್ಗೆ 3.00 ಗಂಟೆ ಸಮಯಕ್ಕೆ ಮನೆಗೆ ಹೋಗಿ ಮಲಗಿದ್ದೆ. ಬೆಳಿಗ್ಗೆ 11.00 ಗಂಟೆಯ ಸಮಯ ಪೊಲೀಸರು ಮನೆಗೆ ಬಂದು ನನ್ನನ್ನು ಕರೆದುಕೊಂಡು ಬಂದಿದ್ದು, ಈಗ ನೀವು ನನ್ನ ಜೊತೆ ಬಂದರೆ ಕೃತ್ಯಕ್ಕೆ ಉಪಯೋಗಿಸಿ ಬಿಸಾಡಿ ಹೋಗಿರುವ ಮುರಿದು ಹೋಗಿರುವ ಡ್ರಾಗರನ್ನು ತೋರಿಸುತ್ತೇನೆ ಅಂತಾ ಹೇಳಿದ್ದು, ಆ ಪ್ರಕಾರ ತನಿಖಾಧಿಕಾರಿಯವರು ಪ್ರಾಸಾ.8 ಮತ್ತು 9 ಇವರನ್ನು ಠಾಣೆಗೆ ಕರೆಸಿ ಸದರಿ ಮಾಹಿತಿಯನ್ನು ಹೇಳಿದ್ದು, ಆ ಪ್ರಕಾರ ಆರೋಪಿಯ ಜೊತೆಗೆ ಆರೋಪಿ ಕರೆದುಕೊಂಡು ಹೋಗಿದ್ದರ ಬಗ್ಗೆ ಪ್ರಾಸಾ.8 - ಜಿಬ್ರಾನ್ ಖಾನ್, ಪ್ರಾಸಾ.9 - ಇರ್ಫಾನ್ ಬೇಗ್ ಇವರು ತಮ್ಮ ಸಾಕ್ಷಿಯಲ್ಲಿ ಪೊಲೀಸರು, ನಮ್ಮನ್ನು ಹಾಗೂ ಆರೋಪಿಯನ್ನು ಜೀಪಿನಲ್ಲಿ ಶೇರವ ಹೋಟೆಲ್ ಬಳಿ ಆಟೋ ನಿಲ್ದಾಣದ ಹತ್ತಿರ ಕರೆದುಕೊಂಡು ಹೋಗಿದ್ದು, ಅಲ್ಲಿ ಚರಂಡಿ ಬಳೆಯಿದ್ದ ಚಾಕುವನ್ನು ಆರೋಪಿ ತೆಗೆದುಕೊಟ್ಟಿದ್ದನ್ನು ಪೊಲೀಸರು ತೆಗೆದುಕೊಂಡರು. ಚಾಕುವಿಗೆ ರಕ್ತ ಹತ್ತಿತ್ತು, ಪೊಲೀಸರು ನಮ್ಮ ಸಹಿ ಪಡೆದರು. ಆ ದಿವಸ ಮಾಡಿದ ಅಮಾನತ್ತು ಮಹಜರ್ ನಿಶಾನೆ ಪಿ.4, 4(ಎ) ನನ್ನ ಸಹಿ ಆಗಿರುತ್ತದೆ ಅಂತಾ ಸಾಕ್ಷಿ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಿದಾಗ ಚಾಕು ಚರಂಡಿ

ಪಕ್ಕದಲ್ಲೇ ಇತ್ತು. ಎಲ್ಲರಿಗೂ ಕಾಣುತ್ತಿತ್ತು, ಆರೋಪಿ ತೋರಿಸಿದ ನಂತರ ಕಾಣಿಸಿತು ಅಂತಾ ನುಡಿದಿರುತ್ತಾರೆ. ಅದೇ ಪ್ರಕಾರ ಪ್ರಾಸಾ.9 ಇವರು ಪಾಟೀ ಸವಾಲಿನಲ್ಲಿ ಸದರಿ ಮೋರಿಯ ಮೇಲಿನ ಕಲ್ಲು ಹಾಸಿನ ಪಕ್ಕ ಸದರಿ ಚಾಕು ಬಿದ್ದಿತ್ತು. ಸದರಿ ಮೋರಿ ಆಲ್ ಅಮಿನ್ ಶಾಲೆಯ ರಸ್ತೆಗೆ ಹೊಂದಿಕೊಂಡಂತೆ ಇದೆ ಅಂದರೆ ಸರಿಯಲ್ಲ. ಚಾಕು ಜನರಿಗೆ ಕಾಣುವಂತೆ ಬಿದ್ದಿತ್ತು ಅಂದರೆ ಸರಿಯಲ್ಲ. ಈ ಚಾಕುವನ್ನು ಸದರಿ ಸಾಕ್ಷಿಗಳ ಮುಖಾಂತರ ಅಮಾನತ್ತುಪಡಿಸಿಕೊಂಡಿದ್ದು, ಆ ಚಾಕು ಎಂ.ಓ.3 ಆಗಿರುತ್ತದೆ. ಆದ್ದರಿಂದ ಅಮಾನತ್ತು ಮಹಜರನ್ನೂ ಸಹಿತ ಸದರಿ ಸಾಕ್ಷಿಗಳ ಮುಖಾಂತರ ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ರುಜುವಾತುಪಡಿಸಿರುತ್ತದೆ.

29. <u>ಎಫ್.ಎಸ್.ಎಲ್. ವರದಿಯ ಬಗ್ಗೆ:</u> ಪ್ರಾಸಾ.12 – ಡಾ.ಶ್ರೀ ವಿದ್ಯಾ ಇವರು ತಮ್ಮ ಸಾಕ್ಷಿಯಲ್ಲಿ ಚನ್ನಪಟ್ಟಣ ಪೂರ್ವ ಪೊಲೀಸ್ ಠಾಣಾಧಿಕಾರಿಗಳು ಸೀಲಾದಂಥ ರಕ್ತವಾದ ಮಣ್ಣು, ಕಂಟ್ರೋಲ್ ಮಣ್ಣು, ಒಂದು ಡ್ರಾಗರ್ ಅನ್ನು ಪರೀಕ್ಷೆ ಮಾಡಿ ರಕ್ತ ಯಾವ ಗುಂಪಿಗೆ ಸೇರುತ್ತದೆ ಅಂತಾ ಕೇಳಿದ್ದು, ನಂತರ ಇದಕ್ಕೆ ಸಂಬಂಧಪಟ್ಟಂತೆ ಪರೀಕ್ಷೆ ಮಾಡಿ ನಿಶಾನೆ ಪಿ.6 ವರದಿಯನ್ನು ಕೊಟ್ಟಿದ್ದು. ಸದರಿ ವರದಿಯಲ್ಲಿ <u>ರಕ್ತವಾದ ಮಣ್ಣು ಮತ್ತು ಕಂಟ್ರೋಲ್ ಮಣ್ಣುಗಳಲ್ಲಿ ರಕ್ತದ ಅಂಶ ಕಂಡು ಬಂದಿತ್ತು. ಅದು ಮಾನವನ ರಕ್ತವಾಗಿತ್ತು</u>. ವಸ್ತು ಸಂಖ್ಯೆ 2 ರಲ್ಲಿ ರಕ್ತದ ಅಂಶ ಕಂಡು ಬರಲಿಲ್ಲ. ರಕ್ತಾಂಶ ತುಂಬಾ ಕಡಿಮೆ ಇದ್ದುದ್ದರಿಂದ ರಕ್ತದ ಗುಂಪನ್ನು ಕಂಡುಹಿಡಿಯಲು ಆಗಲಿಲ್ಲ ಅಂತಾ ಸಾಕ್ಷಿ ನುಡಿದಿದ್ದು, ಸಾಕ್ಷಿ ತನ್ನ ಪಾಟೀ ಸವಾಲಿನಲ್ಲಿ ರಕ್ತದ ಗುಂಪನ್ನು ಕಂಡು ಹಿಡಿಯುವಂತೆ ಪೊಲೀಸರು ತಮ್ಮ ಅರ್ಜಿಯಲ್ಲಿ ವಿನಂತಿಸಿಕೊಂಡಿರುವುದಿಲ್ಲ. ಆದ್ದರಿಂದ ರಕ್ತದ

ಗುಂಪನ್ನು ಕಂಡು ಹಿಡಿದಿರುವುದಿಲ್ಲ. ರಕ್ತವಾದ ಮಣ್ಣು ಮತ್ತು ಟಾರ್ ನಡುವೆ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ಈ ಸಾಕ್ಷಿಯ ಪ್ರಕಾರ ರಕ್ತವಾದ ಮಣ್ಣು ಮತ್ತು ಡ್ರಾಗರ್‌ನ ಮುಖಾಂತರ ಮಾನವನ ರಕ್ತ ಇರುತ್ತದೆ ಅಂತಾ ರುಜುವಾತು ಆಗಿರುತ್ತದೆ. ಆರೋಪಿ ಪರ ವಕೀಲರ ವಾದ, ರಕ್ತ ಯಾವ ಗುಂಪಿಗೆ ಸೇರುತ್ತದೆ ಎಂಬುದರ ಬಗ್ಗೆ ಕೊಟ್ಟಿರುವುದಿಲ್ಲ, ಎಂ.ಓ.3 - ಡ್ರಾಗರನ ಮೇಲೆ ರಕ್ತ ಇರುವುದಿಲ್ಲ ಅಂತಾ ಮಾಡಿದ ವಾದವನ್ನು ಪರಿಶೀಲಿಸಲಾಗಿ, ಸದರಿ ಎಂ.ಓ.3 – ಡ್ರಾಗರ್/ಚಾಕುವನ್ನು ಸ್ಥಳದಿಂದ ಪೊಲೀಸರು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಆರೋಪಿಯೇ ಹಲ್ಲೆ ಮಾಡಿ ತಾನು ತೆಗೆದುಕೊಂಡು ಹೋಗಿರುವುದರಿಂದ ಸದರಿ ಚಾಕುವನ್ನು ನೀರಿನಲ್ಲಿ ತೊಳೆಯಬಹುದು ಅಥವಾ ರಕ್ತದ ಕಲೆ ಸಹಿತ ಇರಬಾರದಾಗೆ ಮಣ್ಣಿನಲ್ಲಿ ಸಹಿತ ಏನಾದರೂ ಮಾಡುವ ಸಾಧ್ಯತೆ ಇರುತ್ತದೆ. ಒಂದು ವೇಳೆ ಸ್ಥಳದಿಂದಲೇ ಎಂ.ಓ.3 ಡ್ರಾಗರನ್ನು ಅಮಾನತ್ತುಪಡಿಸಿಕೊಂಡಿದ್ದಲ್ಲಿ ರಕ್ತದ ಕಲೆ ಸಂಪೂರ್ಣ ಇದ್ದಾಗ, ಆ ರಕ್ತ ಯಾವ ಗುಂಪಿಗೆ ಸೇರುತ್ತದೆ ಅಂತಾ ಕಂಡು ಹಿಡಿಯಲು ಸಾಧ್ಯವಾಗುತ್ತಿತ್ತು. ಆದರೆ, ಸ್ಥಳದಲ್ಲಿ ಎಂ.ಓ.3 ನ್ನು ಅಮಾನತ್ತುಪಡಿಸಿಕೊಂಡಿಲ್ಲ. ಆರೋಪಿಯೇ ತೆಗೆದುಕೊಂಡು ಎಸೆದಿದ್ದರಿಂದ, ಆ ಎಸೆದ ಸ್ಥಳದಲ್ಲಿ ಸೂರ್ಯನ ಕಿರಣಗಳೂ ಸಹಿತ ಅದರ ಮೇಲೆ ಬೀಳುವುದರಿಂದ ಹಾಗೂ ವಾತಾವರಣದ ಆಧಾರದ ಮೇಲೆ ರಕ್ತದ ಕಲೆ ಇರುವ ಸಾಧ್ಯತೆ ಇರುವುದಿಲ್ಲ ಹಾಗೂ ಒಂದೇ ಏಟಿಗೆ ಬೆರಳು ತುಂಡಾಗಿರುವುದರಿಂದ ಸದರಿ ಎಂ.ಓ.3 ನ ಯಾವ ಭಾಗದಲ್ಲಿ ರಕ್ತ ಹತ್ತಿದೆ ಎಂಬುದರ ಬಗ್ಗೆಸಹಿತ, ದೊಡ್ಡ ಪ್ರಮಾಣದ ರಕ್ತ ಹತ್ತಿದೆ ಅಂತಾ ಪರಿಗಣಿಸಲು ಬರಲಾರದು. ಆ ಏಟಿನಿಂದ ಸದರಿ ಡ್ರಾಗರ್ ತುಂಡಾಗಿರುವುದರಿಂದ, ಆರೋಪಿ ಓಡಿ

ಹೋಗುವಾಗ ಆ ತುಂಡಾದ ಮತ್ತು ಹಲ್ಲೆ ಮಾಡಿದ ಎರಡನ್ನೂ ಸಹಿತ ಗಾಬರಿಯಿಂದ ಎತ್ತಿಕೊಂಡು ಹೋಗುವಾಗ ಅಂಥ ಸಂದರ್ಭದಲ್ಲಿ ಮಣ್ಣು ಅದಕ್ಕೆ ತಾಗಿ ಅಥವಾ ಆರೋಪಿಯ ಬಟ್ಟೆಯೂ ಸಹಿತ ತಾಗಿ ರಕ್ತದ ದೊಡ್ಡ ಪ್ರಮಾಣದ ರಕ್ತ ಇಲ್ಲದೇ ಇರುವ ಸಾಧ್ಯತೆ ಇರುತ್ತದೆ. ಆದ್ದರಿಂದ ರಕ್ತದ ಗುಂಪು ನೀಡಿರುವುದಿಲ್ಲ ಎಂಬ ಆಧಾರ ಮೇಲಿಂದ ಎಂ.ಓ.3 ನ್ನು ಆರೋಪಿ ಬಳಸಿ ಹಲ್ಲೆ ಮಾಡಿರುವುದಿಲ್ಲ ಅಂತಾ ನ್ಯಾಯಾಲಯವು ಪರಿಗಣಿಸಲು ಬರಲಾರದು. ಆದ್ದರಿಂದ ಎಫ್.ಎಸ್.ಎಲ್ ವರದಿಯಲ್ಲಿ ತೋರಿಸಿದ ರಕ್ತ ಮಾನವನ ರಕ್ತ ಅಂತ ರುಜುವಾತು ಆಗಿರುತ್ತದೆ.

30. <u>ತನಿಖಾಧಿಕಾರಿಯ ಸಾಕ್ಷ್ಯದ ಬಗ್ಗೆ:</u> <u>ಪ್ರಾಸಾ.15 – ಬಿ.ಪಿ.ಹರೀಶ್</u>, ಪಿ.ಎಸ್.ಐ ಚನ್ನಪಟ್ಟಣ, ಇವರು ದೂರು ಪಡೆದುಕೊಂಡು ಕೇಸು ದಾಖಲು ಮಾಡಿ ಸ್ಥಳಕ್ಕೆ ಹೋಗಿ ಮಹಜರ್ ಮಾಡಿ ನಂತರ ಆರೋಪಿಯನ್ನು ದಸ್ತಗಿರಿ ಮಾಡಲು ಸಿಬ್ಬಂದಿ ನೇಮಕ ಮಾಡಿ ಆರೋಪಿಯ ಸ್ವಇಚ್ಛಾ ಹೇಳಿಕೆ ಪಡೆದುಕೊಂಡು, ನಂತರ ಆರೋಪಿ ತೋರಿಸಿದ ಸ್ಥಳದಲ್ಲಿ ಅಮಾನತ್ತು ಮಹಜರ್ ಮಾಡಿದ್ದು, ಇದಕ್ಕೆ ಸಂಬಂಧಪಟ್ಟಂತೆ ಪ್ರಾಸಾ.8 ಮತ್ತು ಪ್ರಾಸಾ.9 ಅಮಾನತ್ತು ಮಹಜರ್ ಸಾಕ್ಷಿಗಳು ಅಭಿಯೋಜಕ ಸಾಕ್ಷ್ಯಕ್ಕೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾರೆ.

31. ಅದೇ ಪ್ರಕಾರ <u>ಪ್ರಾಸಾ.11 – ಪ್ರಕಾಶ್.ಬಿ.ಕೆ.</u> ಇವರು ಪಿ.ಎಸ್.ಐ ಚನ್ನಪಟ್ಟಣ ಇವರು ತನಿಖೆಯನ್ನು ಮುಂದುವರೆಸಿ ಎಫ್ಎಸ್ಎಲ್ ವರದಿ ಪಡೆದುಕೊಂಡು, ಗಾಯಾಳು ವರದಿ ಪಡೆದುಕೊಂಡು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದು, ಸದರಿ ತನಿಖೆಯನ್ನು

ಪರಿಶೀಲಿಸಲಾಗಿ, ಪ್ರತ್ಯಕ್ಷ ಸಾಕ್ಷಿ, ಗಾಯಾಳು ಸಾಕ್ಷಿ, ವೈದ್ಯಕೀಯ ಸಾಕ್ಷಿ, ಸ್ಥಳ ಮಹಜರ್ ಮತ್ತು ಅಮಾನತ್ತು ಮಹಜರ್ ಸಾಕ್ಷಿಯ ಮುಖಾಂತರ ಆರೋಪಿ ಎಂ.ಒ.3 ನ್ನು ಬಳಸಿಕೊಂಡು ಪ್ರಾಸಾ.1 ರಿಂದ 3 ಇವರು ಬೈಕ್‌ನಲ್ಲಿ ಹೋಗುವಾಗ ಅವರನ್ನು ತಡೆದು ನಿಲ್ಲಿಸಿ ಅವರ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು, ಗಾಂಜಾವನ್ನು ಸೇವಿಸಬೇಡಿ ಅಂತ ಬುದ್ಧಿವಾದ ಹೇಳಿದ್ದು, ಇನ್ನುಳಿದವರೆಲ್ಲರೂ ಹೋಗಿದ್ದು, ಆಗ ಆರೋಪಿ ಅಲ್ಲೇ ಇದ್ದು ಇದಕ್ಕೆ ಸಂಬಂಧಪಟ್ಟಂತೆ ಪ್ರಾಸಾ.2 ಇವರು ಆರೋಪಿಗೆ ಗಾಂಜಾ ಸೇವನೆಯಿಂದ ಏನಾಗುತ್ತದೆ ಎಂಬುದರ ಬಗ್ಗೆ ಬೈದಿದ್ದು, ಆ ಒಂದು ದ್ವೇಷ ಇಟ್ಟುಕೊಂಡು ಎಂ.ಒ.3 ನ್ನು ಬ್ಯಾಗಿನಲ್ಲಿಟ್ಟುಕೊಂಡು ಅವರು ಬರುವ ದಾರಿಯನ್ನು ನೋಡಿ ರಾತ್ರಿ 11.00 ಗಂಟೆಗೆ ತಡೆದು ನಿಲ್ಲಿಸಿ ತನ್ನ ಬ್ಯಾಗ್‌ನಲ್ಲಿರುವ ಎಂ.ಒ.3 - ಡ್ರಾಗರ್‌ನ್ನು ತೆಗೆದುಕೊಂಡು ಪ್ರಾಸಾ.2 ರವರಿಗೆ ತಲೆಗೆ ಹೊಡೆಯಲು ಹೋದಾಗ ಆಗ ಎಡಗೈಯನ್ನು ಮುಂದೆ ತಂದಾಗ ಆ ಏಟು ಎಡಗೈ ಹೆಬ್ಬೆರಳಿಗೆ ಬಿದ್ದು ತುಂಡಾಗಿದ್ದು ಅಂಶವನ್ನು ತನಿಖಾಧಿಕಾರಿಯವರು ಸಮರ್ಪಕವಾಗಿ ತನಿಖೆ ಮಾಡಿ ರುಜುವಾತುಪಡಿಸಿರುತ್ತಾರೆ. ಆದ್ದರಿಂದ <u>ಆರೋಪಿ ಭಾರತೀಯ ದಂಡ ಸಂಹಿತೆ ಕಲಂ.341, 504, 326 ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆ</u> ಅಂತಾ ಅಭಿಯೋಜಕ ಪಕ್ಷವು ನಿಸ್ಸಂಶಯವಾಗಿ ರುಜುವಾತುಪಡಿಸಿರುತ್ತಾರೆ. ಆದ್ದರಿಂದ ಅಂಶ ಸಂಖ್ಯೆ ***1*** ರಿಂದ ***3*** ನ್ನು ಸಕಾರಾತ್ಮಕವಾಗಿ ಉತ್ತರಿಸಲಾರಿಯಿತು.

32. <u>ಅಂಶ ಸಂಖ್ಯೆ **4:**</u> <u>ಭಾರತೀಯ ದಂಡ ಸಂಹಿತೆ ಕಲಂ.**307** ರ ಬಗ್ಗೆ:</u> ಆರೋಪಿ ಪ್ರಾಸಾ.2 ಇವರನ್ನು ಕೊಲೆ ಮಾಡುವ ಉದ್ದೇಶ ಹೊಂದಿರುವುದಿಲ್ಲ, ಒಳಸಂಚನ್ನೂ

ಸಹಿತ ಹೊಂದಿರುವುದಿಲ್ಲ. ಆತನ ಕೊಲೆ ಮಾಡಬೇಕೆಂಬ ಉದ್ದೇಶದಿಂದ ಮುಂಚಿತವಾಗಿ ಯೋಚನೆಯನ್ನೂ ಸಹಿತ ಮಾಡಿರುವುದಿಲ್ಲ, ಆತನ ಕೊಲೆ ಮಾಡಬೇಕೆಂಬ ಉದ್ದೇಶದಿಂದ ಸಮಯವನ್ನು ಸಹಿತ ನೋಡಿರುವುದಿಲ್ಲ. ಕೇವಲ ಹಿಂದೆ ನಡೆದಂತಹ ಗಾಂಜಾ ಸೇವನೆಗೆ ಸಂಬಂಧಪಟ್ಟಂತೆ ಬೈದಿದ್ದು, ಸದರಿ ಆರೋಪಿ ಇವರನ್ನು ನೋಡಿದ ತಕ್ಷಣ ಎಂ.ಒ.3 ನ್ನು ಬಳಸಿ ಹಲ್ಲೆ ಮಾಡಿರುವುದರಿಂದ ಭಾರತೀಯ ದಂಡ ಸಂಹಿತೆ ಕಲಂ.307 ರ ಅಡಿಯಲ್ಲಿ ಅಪರಾಧ ಮಾಡತಕ್ಕಂಥಹ ಯಾವುದೇ ಅಂಶಗಳು ಕಂಡು ಬಂದಿಲ್ಲದೇ ಇರುವುದರಿಂದ ಭಾರತೀಯ ದಂಡ ಸಂಹಿತೆ ಕಲಂ.326 ರ ಅಡಿಯಲ್ಲಿ ಅಪರಾಧ ಆಗತಕ್ಕಂಥ ಅಂಶಗಳು ಕಂಡು ಬಂದಿರುತ್ತವೆ. ಇದಕ್ಕೆ ಸಂಬಂಧಪಟ್ಟಂತೆ <u>ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯ</u> <u>***2011 Crl.L.J 239*** ಕರ್ನಾಟಕ, ರಘುನಾಥ್ ವಿರುದ್ಧ ವಿಜಯನಗರ ಪೊಲೀಸ್ ಠಾಣೆ, ಕರ್ನಾಟಕ ಸರ್ಕಾರ</u> ತೀರ್ಪನ್ನು ಪರಿಶೀಲಿಸಲಾಗಿ, <u>ಆರೋಪಿ ಕೊಲೆ ಮಾಡುವ ಉದ್ದೇಶವನ್ನು ಹೊಂದಿಲ್ಲದೇ ಇದ್ದಾಗ ಹಾಗೂ ಯಾವುದೇ ರೀತಿಯ ವೈರತ್ವ ಇಲ್ಲದೇ ಇದ್ದಾಗ, ಒಂದು ಆಯುಧದಿಂದ ಹಲ್ಲೆ ಮಾಡಿದಾಗ ಅದು ಕಲಂ.307 ರ ಬದಲಾಗಿ ಕಲಂ.326 ಅಡಿಯಲ್ಲಿ ಅಪರಾಧ ಆಗಿರುತ್ತದೆ ಅಂತಾ ಶಿಕ್ಷೆ ವಿಧಿಸಿದ್ದರ ಬಗ್ಗೆ</u> ತೀರ್ಪು ಇರುತ್ತದೆ. ಸದರಿ ತೀರ್ಪನ್ನು ಈ ಕೇಸಿಗೆ ಪರಿಶೀಲಿಸಲಾಗಿ, ಆರೋಪಿ ಭಾರತೀಯ ದಂಡ ಸಂಹಿತೆ ಕಲಂ.326 ರ ಅಡಿಯಲ್ಲಿ ಅಪರಾಧ ಮಾಡಿರುತ್ತಾರೆಯೇ ವಿನಃ ಕಲಂ.307 ರ ಅಡಿಯಲ್ಲಿ ಅಪರಾಧ ಮಾಡಿರುವುದಿಲ್ಲ. ಆದ್ದರಿಂದ ಅಂಶ ಸಂಖ್ಯೆ **4** ನ್ನು ನಕಾರಾತ್ಮಕವಾಗಿ ಉತ್ತರಿಸಲಾಯಿತು.

33. <u>ಅಂಶ ಸಂಖ್ಯೆ **5**:</u> ಅಂಶ ಸಂಖ್ಯೆ 1 ರಿಂದ 4 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶಃ

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ.235(2) ರಡಿಯಲ್ಲಿನ ಪ್ರದತ್ತವಾದ ಅಧಿಕಾರದ ಮುಖಾಂತರ ಆರೋಪಿಯ ವಿರುದ್ಧ ಆರೋಪಣೆ ಮಾಡಲಾದ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ.341, 504 ಮತ್ತು 326 ರ ಅಡಿಯಲ್ಲಿನ ಅಪರಾಧಕ್ಕೆ ತಪ್ಪಿತಸ್ಥರೆಂದು ಸಾಭೀತಾಗಿರುತ್ತದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ.235(1) ರಡಿಯಲ್ಲಿನ ಪ್ರದತ್ತವಾದ ಅಧಿಕಾರದ ಮುಖಾಂತರ ಆರೋಪಿಯ ವಿರುದ್ಧ ಆರೋಪಣೆ ಮಾಡಲಾದ ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ.307 ರ ಅಡಿಯಲ್ಲಿನ ಅಪರಾಧಕ್ಕೆ ನಿರ್ದೋಷಿ ಎಂದು ಸಾಭೀತಾಗಿರುತ್ತದೆ.

ಆರೋಪಿಗೆ ಶಿಕ್ಷೆ ವಿಧಿಸುವುದಕ್ಕಿಂತ ಪೂರ್ವದಲ್ಲಿ ಉಭಯ ವಕೀಲರ ವಾದ ಮಂಡಿಸಲು ಸಮಯ ಮಧ್ಯಾಹ್ನ 1-00 ಗಂಟೆಗೆ ನಿಗದಿಪಡಿಸಲಾಗಿದೆ.

*(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ ಗ್ರೇಡ್ **III** ರವರಿಗೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ **13** ನೇ ಮಾಹೆ ಮಾರ್ಚ್ **2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)*

**(ಎಂ.ಹೆಚ್. ಅಣ್ಣಯ್ಯನವರ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.

****** ******

## ಶಿಕ್ಷೆ ವಿಧಿಸುವುದರ ಬಗ್ಗೆ ಆದೇಶ

ಆರೋಪಿಗೆ ನಿಮ್ಮ ಮೇಲೆ ಇರುವ ಆಪಾದನೆ ರುಜುವಾತು ಆಗಿದ್ದರಿಂದ ನ್ಯಾಯಾಲಯಕ್ಕೆ ಏನಾದರೂ ಹೇಳುವುದು ಇದೆಯೇ ಅಂತ ಕೇಳಿದಾಗ ಆರೋಪಿ ನಮ್ಮ ವಕೀಲರು ಹೇಳುತ್ತಾರೆ ಅಂತ ಹೇಳಿದ್ದು, ನಂತರ ಆರೋಪಿ ಪರ ವಕೀಲರು ಮಾನ್ಯ ನ್ಯಾಯಾಲಯಕ್ಕೆ ಆರೋಪಿಗೆ ತಂದೆ ಇರುವುದಿಲ್ಲ, ತಾಯಿ ಒಬ್ಬಳೇ ಇರುತ್ತಾರೆ. 26 ವರ್ಷದ ಯುವಕನಾಗಿದ್ದು, ಬಡವನಿದ್ದು, ಕೂಲಿ ಮಾಡಿ ಜೀವನ ಸಾಗಿಸಬೇಕಾಗಿದ್ದು, ಈತನನ್ನೇ ಅವಲಂಬಿತರಾದ ತಾಯಿ ಇರುತ್ತಾರೆ. ಆದ್ದರಿಂದ ಮಾನ್ಯ ನ್ಯಾಯಾಲಯವು ಆರೋಪಿ ಮೇಲೆ ಕರುಣೆ ತೋರಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಸರ್ಕಾರಿ ಅಭಿಯೋಜಕರು ಮಾನ್ಯ ನ್ಯಾಯಾಲಯಕ್ಕೆ ಪ್ರಾಸಾ.1 ಈತನ ಕೈಬೆರಳನ್ನು ಡ್ರಾಗರ್‌ನಿಂದ ಹೊಡೆದು ತುಂಡು ಮಾಡಿರುವುದರಿಂದ ಆರೋಪಿಗೆ ಕಠಿಣ ಶಿಕ್ಷೆ ಮತ್ತು ದಂಡ ವಿಧಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಉಭಯ ವಕೀಲರ ವಾದ ಪರಿಶೀಲಿಸಲಾಗಿ, ಆರೋಪಿ 26 ವರ್ಷದ ಯುವಕನಾಗಿದ್ದು, ತಕ್ಷಣವೇ ಘಟನೆ ನಡೆದಿರುವುದರಿಂದ ಕೋಪಗೊಂಡು ಹಲ್ಲೆ ಮಾಡಿರುವುದರಿಂದ ಸದರಿ ಪ್ರಕರಣ ಹೊರತುಪಡಿಸಿ ಆರೋಪಿಯ ಮೇಲೆ ಬೇರೆ ಯಾವುದೇ ಪ್ರಕರಣ ಇರುವುದಿಲ್ಲ. ಜಾಮೀನು ಮಂಜೂರು ಆಗಿದ್ದಾಗಿನಿಂದಲೂ ಸಹಿತ ಆರೋಪಿ ನ್ಯಾಯಾಲಯಕ್ಕೆ ಹಾಜರಾಗಿದ್ದು, ನ್ಯಾಯಾಲಯದ ಷರತ್ತುಗಳನ್ನು ಪಾಲಿಸಿದ್ದು, ಈ ಮೊದಲು ಆರೋಪಿ ಒಂದೂವರೆ ವರ್ಷ ಸದರಿ ಪ್ರಕರಣದಲ್ಲಿ ನ್ಯಾಯಾಂಗ

ಬಂಧನದಲ್ಲಿರುತ್ತಾನೆ. ಖಾಸಗಿ ವಕೀಲರನ್ನು ನೇಮಕ ಮಾಡಿಕೊಳ್ಳುವ ಸಾಮರ್ಥ್ಯ ಹೊಂದಿಲ್ಲದೇ ಇರುವುದರಿಂದ ಜಿಲ್ಲಾ ಕಾನೂನು ಸೇವೆಗಳಿಂದ ವಕೀಲರನ್ನು ನೇಮಕ ಮಾಡಿಕೊಂಡಿರುವುದರಿಂದ ಆರ್ಥಿಕವಾಗಿ ಬಡವನಿರುತ್ತಾನೆ ಅಂತಾ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಆದ್ದರಿಂದ ಆರೋಪಿಯ ವಯಸ್ಸು, ವರಮಾನ, ಆರ್ಥಿಕ ಪರಿಸ್ಥಿತಿ, ಸಾಮಾಜಿಕ ನ್ಯಾಯ ಇವುಗಳನ್ನು ಪರಿಶೀಲಿಸಲಾಗಿರುತ್ತದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯ ***2020 AIAR (CRIMINAL) 38 (STATE OF MADHYA PRADESH VS. UDHAM & ORS.)*** ಸದರಿ ತೀರ್ಪನ್ನು ಪರಿಶೀಲಿಸಲಾಗಿ, ವಿಚಾರಣಾ ನ್ಯಾಯಾಲಯವು ಭಾ.ದಂ.ಸಂ.ಕಲಂ.326 ರ ಅಡಿಯಲ್ಲಿ ಮೂರು ವರ್ಷ ಸಜೆ ವಿಧಿಸಿದ್ದು, ಸದರಿ ತೀರ್ಪಿನ ವಿರುದ್ಧ ಶಿಕ್ಷೆ ಕಡಿಮೆ ಮಾಡಬೇಕು ಅಂತಾ ಮೇಲ್ಮನವಿ ಸಲ್ಲಿಸಿದಾಗ ಮಾನ್ಯ ಉಚ್ಚ ನ್ಯಾಯಾಲಯವು ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿ ಈಗಾಗಲೇ ಆರೋಪಿ 4 ದಿವಸ ಶಿಕ್ಷೆ ಅನುಭವಿಸಿದ್ದರಿಂದ ರೂ.1,500/- ದಂಡವನ್ನು ಹೆಚ್ಚಿಗೆ ಮಾಡಲಾಗಿರುತ್ತದೆ. ಸದರಿ ತೀರ್ಪಿನ ವಿರುದ್ಧ ಅಭಿಯೋಜಕ ಪಕ್ಷವು ಮೇಲ್ಮನವಿ ಸಲ್ಲಿಸಿದಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯ ಸದರಿ ತೀರ್ಪು ಪ್ಯಾರಾ 12 ಮತ್ತು 15 ರಲ್ಲಿ ಸದರಿ ಘಟನೆ ದುಡುಕಿನಿಂದ ಆಗಿದ್ದು, ಕ್ರಿಮಿನಲ್ ಹಿನ್ನಲೆಯನ್ನು ಹೊಂದಿರುವುದಿಲ್ಲ, ತಕ್ಷಣ ನಡೆದಂತ ಘಟನೆಯಾಗಿದ್ದು, ಇಬ್ಬರು ಜನ ಯುವಕರಿದ್ದು, ಒಬ್ಬ ಹಿರಿಯ ನಾಗರೀಕರಿದ್ದು, ಇದನ್ನು ಪರಿಗಣಿಸಿ ಮೂರು ತಿಂಗಳು ಶಿಕ್ಷೆ ಮತ್ತು ರೂ.75 ಸಾವಿರ ದಂಡ ವಿಧಿಸಿದ್ದರ ಬಗ್ಗೆ, ದಂಡ ಕಟ್ಟುವಲ್ಲಿ ತಪ್ಪಿದ್ದಲ್ಲಿ ಒಂದು ತಿಂಗಳ ಸಜೆ ವಿಧಿಸಿದ್ದರ ಬಗ್ಗೆ ತೀರ್ಪು

ಇರುತ್ತದೆ. ಸದರಿ ತೀರ್ಪನ್ನು ಈ ಕೇಸಿಗೆ ಪರಿಶೀಲಿಸಲಾಗಿ, ಆರೋಪಿ ಈಗಾಗಲೇ ಒಂದು ವರ್ಷ 8 ತಿಂಗಳು 15 ದಿವಸ ನ್ಯಾಯಾಂಗ ಬಂಧನದಲ್ಲಿರುವುದರಿಂದ, ಆರ್ಥಿಕ ಬಡವನಾಗಿದ್ದು, ತಂದೆ ಇರುವುದಿಲ್ಲ, ತಾಯಿ ಇದ್ದು, ಅವಳ ಯೋಗಕ್ಷೇಮವನ್ನು ನೋಡಿಕೊಳ್ಳಬೇಕಾಗಿರುವುದರಿಂದ ಹಾಗೂ 26 ವರ್ಷದ ಯುವಕನಾಗಿರುವುದರಿಂದ ಸದರಿ ತೀರ್ಪಿನ ಪ್ರಕಾರ ನ್ಯಾಯಾಲಯವು ಆರೋಪಿಯ ಮೇಲೆ ಕರುಣೆ ತೋರಿಸುವುದ ಸೂಕ್ತ ಅಂತಾ ಕಂಡು ಬಂದಿರುವುದರಿಂದ ಈ ಕೆಳಗಿನಂತೆ ಆದೇಶಃ-

## ಆದೇಶ

ಆರೋಪಿಗೆ ಭಾರತೀಯ ದಂಡ ಸಂಹಿತೆ ಕಲಂ.326 ರಡಿಯಲ್ಲಿ ಒಂದು ವರ್ಷ 8 ತಿಂಗಳು ಸಾದಾ ಸಜೆ ವಿಧಿಸಲಾಗಿದೆ ಮತ್ತು ರೂ.5,000/- ದಂಡ ವಿಧಿಸಲಾಗಿದೆ. ದಂಡ ಕಟ್ಟಲು ತಪ್ಪಿದಲ್ಲಿ ಪುನಃ 15 ದಿವಸ ಸಾದಾ ಸಜೆ ಅನುಭವಿಸತಕ್ಕದ್ದು ಅಂತಾ ಆದೇಶಿಸಲಾಯಿತು.

ಆರೋಪಿಗೆ ಭಾರತೀಯ ದಂಡ ಸಂಹಿತೆ ಕಲಂ.504 ರಡಿಯಲ್ಲಿ ಒಂದು ತಿಂಗಳು ಸಾದಾ ಸಜೆ ವಿಧಿಸಲಾಗಿದೆ.

ಆರೋಪಿಗೆ ಭಾರತೀಯ ದಂಡ ಸಂಹಿತೆ ಕಲಂ.341 ರಡಿಯಲ್ಲಿ ಒಂದು ತಿಂಗಳ ಸಾದಾ ಸಜೆ ವಿಧಿಸಲಾಗಿದೆ.

ಈ ಮೇಲ್ಕಂಡ ಶಿಕ್ಷೆಯು ಏಕಕಾಲಕ್ಕೆ ಜಾರಿಗೆ ಬರತಕ್ಕದ್ದು.

ಆರೋಪಿ ಈ ಮೊದಲು ನ್ಯಾಯಾಂಗ ಬಂಧನದಲ್ಲಿರುವ ಅವಧಿಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.428 ರಡಿ ವಜಾವಟ್ಟು (set off) ಮಾಡಲಾಗಿ ಇನ್ನುಳಿದ ಶಿಕ್ಷೆಯನ್ನು ಆರೋಪಿ ಅನುಭವಿಸತಕ್ಕದ್ದು.

ಮು.ಮಾ.1 ಮತ್ತು 2 - ಬೆಲೆ ಬಾಳದ ವಸ್ತುವಾಗಿರುವುದರಿಂದ ಅದನ್ನು ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಯಿತು.

ಮು.ಮಾ.3 ನ್ನು ಮೇಲ್ಮನವಿ ಅವಧಿ ಮುಗಿದ ನಂತರ ಹರಾಜು ಮಾಡಲು ಆದೇಶಿಸಲಾಯಿತು.

ಆರೋಪಿಗೆ ತೀರ್ಪಿನ ಧೃಢೀಕೃತ ಪ್ರತಿಯನ್ನು ಉಚಿತವಾಗಿ ಕೊಡಲು ಆದೇಶಿಸಲಾಯಿತು.

ಸರ್ಕಾರಿ ಅಭಿಯೋಜಕರು ಸಲ್ಲಿಸಿದ ದಂಡ ಪ್ರಕ್ರಿಯಾ ಸಂಹಿತೆ ಕಲಂ.340 ರಡಿಯಲ್ಲಿ ಸಲ್ಲಿಸಿದ ಅರ್ಜಿ ಊರ್ಜಿತವಾಗತಕ್ಕದ್ದಲ್ಲ. ಆದ್ದರಿಂದ ಸದರಿ ಅರ್ಜಿಯನ್ನು ವಜಾ ಮಾಡಲಾಯಿತು.

*(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ ಗ್ರೇಡ್ III ರವರಿಗೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ **13** ನೇ ಮಾರ್ಚ್ ಮಾಹೆ **2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)*

**(ಎಂ.ಹೆಚ್. ಅಣ್ಣಯ್ಯನವರ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.

## -: ಅನುಬಂಧ :-

ಅಭಿಯೋಜನೆ ಪರವಾಗಿ ಮಾಡಿದ ಸಾಕ್ಷಿಗಳ ವಿವರಃ-

| | | |
|---|---|---|
| ಪ್ರಾಸಾ.1 | : | ಸಿಮ್ರಾನ್ ಖಾನ್ |
| ಪ್ರಾಸಾ.2 | : | ಫರಾನ್ ಮೆಹದಿ |
| ಪ್ರಾಸಾ.3 | : | ಸುಹೇಲ್ ಖಾನ್ |
| ಪ್ರಾಸಾ.4 | : | ಮುಷಾಫಿರ್ |
| ಪ್ರಾಸಾ.5 | : | ಲಿಯಾಕತ್ |
| ಪ್ರಾಸಾ.6 | : | ಫರೀದ್ ಖಾನ್ |
| ಪ್ರಾಸಾ.7 | : | ಅರೇಂದ್ರಗೌಡ |
| ಪ್ರಾಸಾ.8 | : | ಜಿಬ್ರಾನ್ ಖಾನ್ |
| ಪ್ರಾಸಾ.9 | : | ಇರ್ಫಾನ್ ಬೇಗ್ |
| ಪ್ರಾಸಾ.10 | : | ಜೋಸೇಫ್ |
| ಪ್ರಾಸಾ.11 | : | ಪ್ರಕಾಶ.ಬಿ.ಕೆ. |
| ಪ್ರಾಸಾ.12 | : | ಡಾ.ಶ್ರೀ ವಿಧ್ಯಾ.ವೈ |
| ಪ್ರಾಸಾ.13 | : | ಡಾ.ಕೆ.ಟಿ.ರಮೇಶ |
| ಪ್ರಾಸಾ.14 | : | ಡಾ.ರಮೇಶ.ಆರ್. |
| ಪ್ರಾಸಾ.15 | : | ಬಿ.ಸಿ.ಹರೀಶ |

<u>ಅಭಿಯೋಜನೆ ಪರವಾಗಿ ಮಾಡಿದ ದಾಖಲೆಗಳ ವಿವರಃ-</u>

| | | |
|---|---|---|
| ನಿಶಾನೆ ಪಿ.1 | : | ದೂರು |
| ನಿಶಾನೆ ಪಿ.1(ಎ) | : | ಪ್ರಾಸಾ.1 ರವರ ಸಹಿ |
| ನಿಶಾನೆ ಪಿ.1(ಬಿ) | : | ಪ್ರಾಸಾ.15 ರವರ ಸಹಿ |
| ನಿಶಾನೆ ಪಿ.2 | : | ಮಹಜರ್ |
| ನಿಶಾನೆ ಪಿ.2(ಎ) | : | ಪ್ರಾಸಾ.1 ರವರ ಸಹಿ |
| ನಿಶಾನೆ ಪಿ.2(ಬಿ) | : | ಪ್ರಾಸಾ.5 ರವರ ಸಹಿ |
| ನಿಶಾನೆ ಪಿ.2(ಸಿ) | : | ಪ್ರಾಸಾ.6 ರವರ ಸಹಿ |
| ನಿಶಾನೆ ಪಿ.2(ಡಿ) | : | ಪ್ರಾಸಾ.15 ರವರ ಸಹಿ |
| ನಿಶಾನೆ ಪಿ.3 | : | ವರದಿ |
| ನಿಶಾನೆ ಪಿ.3(ಎ) | : | ಪ್ರಾಸಾ.7 ರವರ ಸಹಿ |
| ನಿಶಾನೆ ಪಿ.4 | : | ಅಮಾನತ್ತು ಮಹಜರ್ |
| ನಿಶಾನೆ ಪಿ.4(ಎ) | : | ಪ್ರಾಸಾ.8 ರವರ ಸಹಿ |
| ನಿಶಾನೆ ಪಿ.4(ಬಿ) | : | ಪ್ರಾಸಾ.15 ರವರ ಸಹಿ |
| ನಿಶಾನೆ ಪಿ.5 | : | ಗಾಯಾಳು ಹೇಳಿಕೆ |
| ನಿಶಾನೆ ಪಿ.5(ಎ) | : | ಪ್ರಾಸಾ.10 ರವರ ಸಹಿ |
| ನಿಶಾನೆ ಪಿ.6 | : | ಎಫ್.ಎಸ್.ಎಲ್ ವರದಿ |
| ನಿಶಾನೆ ಪಿ.6(ಎ) | : | ಪ್ರಾಸಾ.11 ರವರ ಸಹಿ |
| ನಿಶಾನೆ ಪಿ.7 | : | ಗಾಯದ ಪ್ರಮಾಣಪತ್ರ |
| ನಿಶಾನೆ ಪಿ.7(ಎ) | : | ಪ್ರಾಸಾ.11 ರವರ ಸಹಿ |
| ನಿಶಾನೆ ಪಿ.7(ಬಿ) | : | ಪ್ರಾಸಾ.14 ರವರ ಸಹಿ |
| ನಿಶಾನೆ ಪಿ.8 | : | ಪ್ರಥಮ ವರ್ತಮಾನ ವರದಿ |
| ನಿಶಾನೆ ಪಿ.8(ಎ) | : | ಪ್ರಾಸಾ.15 ರವರ ಸಹಿ |
| ನಿಶಾನೆ ಪಿ.9 | : | ಪಿ.ಎಫ್.ನಂ.6/2020 |
| ನಿಶಾನೆ ಪಿ.9(ಎ) | : | ಪ್ರಾಸಾ.15 ರವರ ಸಹಿ |
| ನಿಶಾನೆ ಪಿ.10 | : | ಆರೋಪಿಯ ಸ್ವಇಚ್ಛಾ ಹೇಳಿಕೆ |

ನಿಶಾನೆ ಪಿ.10(ಎ) : ಪ್ರಾಸಾ.15 ರವರ ಸಹಿ

ನಿಶಾನೆ ಪಿ.11 : ಪ್ರಾಸಾ.3 ರವರ ಹೇಳಿಕೆ

ಆರೋಪಿತರ ಪರವಾಗಿ ಮಾಡಿದ ಸಾಕ್ಷಿಗಳ ವಿವರಃ-

------ಇಲ್ಲ------

ಆರೋಪಿತರ ಪರವಾಗಿ ಮಾಡಿದ ದಾಖಲೆಗಳ ವಿವರಃ-

------ಇಲ್ಲ------

ಅಭಿಯೋಜನೆ ಪರವಾಗಿ ಗುರುತಿಸಿಕೊಂಡ ಮು.ಮಾ.ಗಳ ವಿವರಃ-

ಮು.ಮಾ.1 : ಸಾದಾ ಮಣ್ಣು

ಮು.ಮಾ.2 : ರಕ್ತಮಿಶ್ರಿತ ಮಣ್ಣು

ಮು.ಮಾ.3 : ಚಾಕು/ಡ್ರಾಗರ್

**(ಎಂ.ಹೆಚ್. ಅಣ್ಣಯ್ಯನವರ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.